ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 51 | ಡಿಸೆಂಬರ್ 20, 1981 | ಬೆಲೆ : 60 ಪೈಸೆ

ಪ್ರತಿಗಾಮಿಗಳಿಗೆ ಸೋಲು

ಪೋಲೆಂಡ್‌ನಲ್ಲಿ ಕೆಲವು ಸಮಯದಿಂದ ಸೊಲಿಡಾರಿಟಿಯೆಂಬ ಸಂಸ್ಥೆಯು ಪರವಾಗಿ ನಡೆಯುತ್ತಿದ್ದ ಸರಕಾರದ ವಿರುದ್ಧ ಚಳುವಳಿಯು ದೇಶದ ಸ್ವಾತಂತ್ರಕ್ಕೂ, ಅಲ್ಲಿಯ ಸಮಾಜವಾದಿ ವ್ಯವಸ್ಥೆಗೂ ಸವಾಲಾಗಿ ಬಂದಿದ್ದರಿಂದ, ಪೋಲೆಂಡಿನ ಸರಕಾರ ದೇಶದಲ್ಲಿ ಇತ್ತೀಚೆಗೆ ತುರ್ತುಪರಿಸ್ಥಿತಿಯನ್ನು ಜಾರಿಮಾಡಿ ಈ ಚಟುವಟಿಕೆಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂತು. ಸರಕಾರ ತೆಗೆದುಕೊಂಡ ದಿಟ್ಟ ಕ್ರಮಗಳ ಪರಿಣಾಮವಾಗಿ ಪರಿಸ್ಥಿತಿ ಹತೋಟಿಗೆ ಬಂದಿರುವುದು ಪತ್ರಿಕೆಗಳಲ್ಲಿ ಬಂದಿರುವ ವರದಿಗಳಿಂದ ಸ್ಪಷ್ಟವಾಗಿದೆ. ಪೋಲೆಂಡಿನ ಸರಕಾರದ ಕ್ರಮಗಳಿಗೆ ನಮ್ಮ ಸಂಪೂರ್ಣ ಬೆಂಬಲವಿದೆ.

ಸೊಲಿಡಾರಿಟಿಯು ನಡೆಸುತ್ತಿದ್ದ ಚಟುವಟಿಕೆಗಳು ಸಾಮ್ರಾಜ್ಯಶಾಹಿಗಳಿಗೆ ಅನುಕೂಲಕರವಾಗಿದ್ದರಿಂದಲೇ, ಪಾಶ್ಚಿಮಾತ್ಯ ರಾಷ್ಟ್ರಗಳು, ಮುಖ್ಯವಾಗಿ ಅಮೇರಿಕದವರು ಅವುಗಳಿಗೆ ಪ್ರೋತ್ಸಾಹ ಕೊಡುತ್ತಿದ್ದುವು. ಕ್ಯಾಥೋಲಿಕ್ ಚರ್ಚ್ ಸಂಸ್ಥೆಯೂ ಅದಕ್ಕೆ ಬೆಂಬಲ ಕೊಡುತ್ತಿದ್ದು ಸಮಾಜವಾದದ ಅಡಿಪಾಯಕ್ಕೆ ಧಕ್ಕೆ ತರಲು ಪ್ರಯತ್ನಿಸುತ್ತಿದ್ದವು. ಆದರೆ ಪೋಲೆಂಡ್‌ನ ಸರಕಾರವೂ, ಅಲ್ಲಿಯ ಕಮ್ಯುನಿಸ್ಟ್ ಪಾರ್ಟಿಯೂ ಈಗ ಎಚ್ಚರಗೊಂಡು ಈ ಛಿದ್ರಕಾರಿ ಚಟುವಟಿಕೆಗಳನ್ನದುರಿಸಲು ಯಶಸ್ವಿಯಾದ

ಸಂಪಾದಕೀಯ

ಕ್ರಮಗಳನ್ನು ತೆಗೆದುಕೊಂಡಿವೆ. ಇದಕ್ಕೆ ಎಲ್ಲ ಪುರೋಗಾಮಿಗಳೂ, ಪ್ರಜಾಪ್ರಭುತ್ವವಾದಿಗಳೂ ಬೆಂಬಲಕೊಡುವರೆಂದು ನಾವು ನಂಬಿದ್ದೇವೆ.

ಭಾರತದ ಕೆಲವು ಪಕ್ಷಗಳ ನಾಯಕರು ಪೋಲೆಂಡಿನ ತುರ್ತುಪರಿಸ್ಥಿತಿಯನ್ನು ಪ್ರತಿಭಟಿಸಿರುವುದು ಹಾಸ್ಯಾಸ್ಪದವಾಗಿದೆ. ಅಲ್ಲಿಯ ಪರಿಸ್ಥಿತಿಗೂ, ಭಾರತದಲ್ಲಿದ್ದ ತುರ್ತುಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಭಾರತದಲ್ಲಿ ಪ್ರಜಾಪ್ರಭುತ್ವ ಚಳುವಳಿಯನ್ನು ಮಟ್ಟಹಾಕಲು ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿದ್ದರೆ, ಪೋಲೆಂಡಿನಲ್ಲಿ ಸಮಾಜವಾದದ ರಕ್ಷಣೆಗೆ, ಸಾಮ್ರಾಜ್ಯಶಾಹಿಗಳ ಪಿತೂರಿಗಳನ್ನದುರಿಸಲು ಅದನ್ನು ತರಲಾಗಿದೆ. ಇದನ್ನು ಈ ಪಕ್ಷಗಳ ನಾಯಕರು ಗಮನಿಸುವುದಗತ್ಯವಾಗಿದೆ.

ಪೋಲೆಂಡಿನ ಘಟನೆಗಳು ಆಂತರಿಕ ಘಟನೆಗಳಾಗಿವೆಯೆಂದೂ, ಅವರೇ ಅದನ್ನು ಬೇಗನೇ ಬಗೆಹರಿಸುವರೆಂದೂ ಆಶಿಸುವ ಪ್ರತಿಕ್ರಿಯೆಯನ್ನು ರಷ್ಯಾ, ಚೀನಾ ಸರಕಾರಗಳು ವ್ಯಕ್ತಪಡಿಸಿದೆ. ಭಾರತ ಸರಕಾರವೂ ಇದೇ ಅಭಿಪ್ರಾಯ ಪಟ್ಟಿದೆ. ಆದರೆ ಪರಿಸ್ಥಿತಿಯೇನಾದರೂ ವಿಕೋಪಕ್ಕೆ ಹೋದಲ್ಲಿ, ಪೋಲೆಂಡ್ ಸರಕಾರ ಸೋವಿಯೆತ್ ಸರಕಾರದ ನೆರವನ್ನು ಕೇಳಿದಲ್ಲಿ ಆಗ ಸೋವಿಯತ್‌ನವರು ನೆರವು ಕೊಟ್ಟರೆ ಎಲ್ಲರೂ ಅದನ್ನು ಬೆಂಬಲಿಸುವರೆಂದು ನಂಬಿದ್ದೇವೆ. ಸಮಾಜವಾದಕ್ಕೆ ಜಯವಾಗಲಿ!

ಕಾಂ. ಎಂ. ಕೆ. ಪುನರಾಯ್ಕೆ

ಮಂಗಳೂರಿನಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯಸಮ್ಮೇಳನವು ಇಪ್ಪತ್ತೊಂದು ಸದಸ್ಯರ ರಾಜ್ಯಸಮಿತಿಯನ್ನು ಆಯ್ಕೆ ಮಾಡಿದೆ. 21 ಸದಸ್ಯರ ಪೈಕಿ 17 ಮಂದಿಯನ್ನು ಚುನಾಯಿಸಲಾಗಿದ್ದು, ಇನ್ನೂ ನಾಲ್ಕು ಸ್ಥಾನಗಳನ್ನು ರಾಜ್ಯಸಮಿತಿಯು ಭರ್ತಿಮಾಡುವುದಕ್ಕೆ ಸಮ್ಮೇಳನವು ಅಧಿಕಾರವಿತ್ತಿದೆ.

ಹೊಸತಾಗಿ ಆಯ್ಕೆಯಾಗಿರುವ ರಾಜ್ಯಸಮಿತಿಯು ಸೇರಿ ಕಾಂ. ಎಂ. ಕೆ. ಭಟ್ ಅವರನ್ನು ರಾಜ್ಯಸಮಿತಿ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಮಾಡಿದೆ. ಕಾಂ. ಎಂ. ಕೆ. ಭಟ್ ಅವರೂ ಸೇರಿದಂತೆ ಆರು ಮಂದಿಯ ಸೆಕ್ರೆಟಾರಿಯೆಟ್ ಸಹಾ ಆಯ್ಕೆಯಾಗಿದೆ. ಸೆಕ್ರೆಟಾರಿಯೆಟ್‌ನ ಉಳಿದ ಸದಸ್ಯರುಗಳು : ಕಾಂ. ಎಸ್. ಎಲ್. ಉಪಾಧ್ಯಾಯ, ಕಾಂ. ಸಿ. ನಂಜುಂಡಪ್ಪ, ಕಾಂ. ಪಿ. ರಾಮಚಂದ್ರರಾವ್, ಕಾಂ. ವಿ.ಜೆ.ಕೆ. ನಾಯರ್, ಕಾಂ. ಎಸ್. ಸೂರ್ಯನಾರಾಯಣರಾವ್.

ಚುನಾಯಿತರಾದ ಉಳಿದ ಹನ್ನೊಂದು ರಾಜ್ಯಸಮಿತಿ ಸದಸ್ಯರುಗಳು ಕಾಂ. ಎನ್. ಕೆ. ಉಪಾಧ್ಯಾಯ, ಕಾಂ. ಕೆ. ಆರ್. ಶ್ರೀಯಾನ್, ಕಾಂ. ಯು. ಜನಾರ್ಧನ ನ್ಯಾಕ್, ಕಾಂ. ಅಬ್ರಹಾಂ ಕರ್ಕರ್ಡ, ಕಾಂ. ಎಂ. ಎನ್. ಉಗ್ರಪ್ಪ, ಕಾಂ. ಟಿ. ಎಸ್. ಅನಂತರಾಮು, ಕಾಂ. ಪಿ. ಕೆ. ಸುಬ್ರಮಣಿ, ಕಾಂ. ಟಿ. ಎಸ್. ಮಣಿ, ಕಾಂ. ಕೆ. ಆರ್. ನಾಯಕ್, ಕಾಂ. ಮುಹಮ್ಮದ್ ದಸ್ತಗೀರ್, ಕಾಂ. ವಿ. ಎನ್. ಹಳಕಟ್ಟಿ. ಹೊಸತಾಗಿ ಚುನಾಯಿತವಾಗಿರುವ ರಾಜ್ಯಸಮಿತಿ ಸದಸ್ಯರುಗಳು, ಸೆಕ್ರೆಟಾರಿಯೆಟ್ ಸದಸ್ಯರುಗಳು ಮತ್ತು ರಾಜ್ಯಸಮಿತಿ ಕಾರ್ಯದರ್ಶಿಯವರನ್ನು ಐಕ್ಯರಂಗವು ಅಭಿನಂದಿಸುತ್ತದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ೧೧ನೇ ರಾಜ್ಯ ಸಮ್ಮೇಳನದ ಅಂಗವಾಗಿ

ಬೃಹತ್ ರ್‍ಯಾಲಿ; ಬಹಿರಂಗ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯ ಸಮ್ಮೇಳನವು ಮಂಗಳೂರಿನಲ್ಲಿ ಡಿಸೆಂಬರ್ 11 ರಿಂದ 14ರ ವರೆಗೆ ನಡೆಯಿತು. ಸಮ್ಮೇಳನವು ಮಂಗಳೂರಿನ ಮೋರ್ಗನ್ಸ್‌ಗೇಟ್‌ನ 'ಎ. ಕೆ. ನಾರಾಯಣನಗರ'ದಲ್ಲಿ ಸಮಾವೇಶಗೊಂಡಿತ್ತು.

ಆರಂಭದಲ್ಲಿ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಸೂರ್ಯನಾರಾಯಣರಾವ್ ಅವರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನವು ಆರಂಭವಾಯಿತು. ಸಮ್ಮೇಳನಕ್ಕೆ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ.ಎಂ. ಎಸ್. ನಂಬೂದಿರಿಪಾಡ್‌ರು ಆಗಮಿಸಿದ್ದರು.

ಧ್ವಜಾರೋಹಣ ನೆರವೇರಿಸಿದ ಕಾಂ. ಸೂರ್ಯನಾರಾಯಣರಾವ್ ಅವರು ಮಾತನಾಡುತ್ತಾ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನಸಾಮಾನ್ಯರ ಬೇಡಿಕೆಗಳ ಕುರಿತು ನಡೆಸಿದ ಉಜ್ವಲ ಹೋರಾಟಗಳನ್ನು ಪ್ರಸ್ತಾಪಿಸುತ್ತಾ ದೇಶದ ಭೂಮಾಲಕ-ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ, ಸರಕಾರದ ದಿವಾಳಿಖೋರ ಆರ್ಥಿಕ ನೀತಿಗೆದುರಾಗಿ ನಡೆಸಿದ ಹೋರಾಟದ ಪರಂಪರೆಯ ಕುರಿತು ತಿಳಿಸಿದರು.

ಕೆಂಬಾವುಟದ ನೇತೃತ್ವದಲ್ಲಿ ಜಗತ್ತಿನಾದ್ಯಂತ ಶೋಷಿತ ಜನರು ನಡೆಸುತ್ತಿರುವ ಅಪ್ರತಿಮ ಹೋರಾಟಗಳನ್ನು ವಿವರಿಸಿದ ಕಾಂ. ಸೂರಿಯವರು ದುಡಿಯುವ ವರ್ಗವನ್ನು ಸಂಕೇತಿಸುವ ಕೆಂಬಾವುಟದ ಹಿರಿಮೆಯನ್ನು ಎತ್ತಿಹಿಡಿಯಲು ಶ್ರಮಿಸಬೇಕೆಂದು ಕರೆ ನೀಡಿದರು.

ದೇಶದ ರೈತ-ಕಾರ್ಮಿಕರು, ಜನಸಾಮಾನ್ಯರು, ವಿದ್ಯಾರ್ಥಿ-ಯುವಜನರು, ಮಹಿಳೆಯರು ಸಿಡಿದೆದ್ದು ಹೋರಾಟಕ್ಕಿಳಿದಿದ್ದು ಈ ಹೋರಾಟವನ್ನು ಇನ್ನಿತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಡಗೂಡಿ ತೀವ್ರಗೊಳಿಸಲು ಪಕ್ಷದ ಕಾರ್ಯಕರ್ತರು ತೀವ್ರವಾಗಿ ಶ್ರಮಿಸಬೇಕೆಂದು ಕರೆ ನೀಡಿದರು.

ಕಾಂ. ಸೂರಿಯವರು ಮಾತನಾಡುವ ಮೊದಲು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಗಾತಿಗಳು ಕ್ರಾಂತಿಗೀತೆಗಳನ್ನು ಹಾಡಿದರು.

ಅಧ್ಯಕ್ಷ ಮಂಡಳಿ

ಪಕ್ಷದ 11ನೇ ರಾಜ್ಯಸಮ್ಮೇಳನಕ್ಕೆ ರಾಜ್ಯದ 18 ಜಿಲ್ಲೆಗಳಿಂದ 193 ಪ್ರತಿನಿಧಿಗಳು ಆಗಮಿಸಿದ್ದರು. ಸಮ್ಮೇಳನದ ಕಲಾಪಗಳನ್ನು ನಿರ್ವಹಿಸಲು ಕಾಂ.ಎಸ್. ಎಲ್. ಉಪಾಧ್ಯಾಯ, ವಿ. ಜೆ. ಕೆ. ನಾಯರ್, ಕೆ. ಮಂಜುಸಬ್ಬ, ಕೆ. ಆರ್. ನಾಯಕ್ ಮತ್ತು ಕಾಂ. ಎಸ್. ಅಕ್ಷ್ರಯ್ಯನವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಚುನಾಯಿಸಲಾಯಿತು.

ಪ್ರತಿನಿಧಿಗಳಿಗೆ ಸ್ವಾಗತ

ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರೂ, ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಕಾಂ. ಪಿ. ರಾಮಚಂದ್ರರಾವ್ ಅವರು ಸಮ್ಮೇಳನಕ್ಕೆ ಆಗಮಿಸಿದ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ.ಎಂ.ಎಸ್. ರಿಗೂ ಮತ್ತು ರಾಜ್ಯದಾದ್ಯಂತದಿಂದ ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳಿಗೆ ಸ್ವಾಗತ ಕೋರಿದರು.

ಕಮ್ಯುನಿಸ್ಟ್ ಚಳುವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಿರುವ ಪರಂಪರೆಯನ್ನು ಪ್ರಸ್ತಾಪಿಸಿದ ಕಾಂ. ಪಿ. ಆರ್. ಅವರು ರೈತಕಾರ್ಮಿಕ ಹೋರಾಟಗಳಲ್ಲಿ ಮುಂಚೂಣಿಯಾಗಿ ನಿಂತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನಸಾಮಾನ್ಯ ಆಶಾದೀವಿಗೆಯಾಗಿದೆ ಎಂದರು.

ಕಾಂ. ಪಿ. ಆರ್. ಅವರು ಮುಂದುವರೆದು "ವರ್ಗ ಜಾಗೃತಿ, ಸಂಘಟನೆ ಮತ್ತು ಹೋರಾಟದ ಪರಂಪರೆಯುಳ್ಳ ಕಾರ್ಮಿಕವರ್ಗದ ರಾಜಕೀಯ ಪಕ್ಷವನ್ನು ಕಟ್ಟಿ ಬೆಳೆಸಿರುವ, ಮಹಾನ್ ಹೋರಾಟದ ಪರಂಪರೆಯುಳ್ಳ ದಕ್ಷಿಣ ಕನ್ನಡ ಜಿಲ್ಲೆಗೆ ನಿಮ್ಮನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ" ಎಂದರು.

ಶ್ರದ್ಧಾಂಜಲಿ

ಸಮ್ಮೇಳನದ ಕಲಾಪಗಳು ಆರಂಭವಾಗುವ ಮೊದಲು ಇತ್ತೀಚಿನ ರೈತ-ಕಾರ್ಮಿಕ ಹೋರಾಟಗಳಲ್ಲಿ ತಮ್ಮ ಪ್ರಾಣತೆತ್ತ ಹುತಾತ್ಮರಿಗೆ, ಇತ್ತೀಚೆಗೆ ಅಗಲಿರುವ ರಶಿಯಾದ ಮಾಜಿಪ್ರಧಾನಿ ಕೊಸಿಗಿನ್, ಯುಗೊಸ್ಲಾವಿಯಾದ ಟಿಟೋ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಎ. ಬಾಲಸುಬ್ರಮಣ್ಯಂ, ಕಾಂ. ದಿನೇಶ್ ಭಟ್ಟಾಚಾರ್ಯ, ಸಿ. ಪಿ. ಐ. ಮುಂದಾಳುಗಳಾದ ಕಾಂ. ಪಿ. ಸಿ. ಜೋಶಿ, ಭೂಪೇಶ್ ಗುಪ್ತಾ, ಡಾ॥ ಗಂಗಾಧರ ಅಧಿಕಾರಿಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ರಾಜ್ಯದ ಪಕ್ಷದ ಚಟುವಟಿಕೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಕಾಂ. ವಾಸನ್, ಜಿ. ವಿ. ಪವಾರ್, ಕಾಂ. ಚುಡೊ ಇವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಕಳೆದ ತಿಂಗಳು ಅಗಲಿದ ಡಾ॥ ದ. ರಾ. ಬೇಂದ್ರೆಯವರಿಗೆ, ಬೆಂಗಳೂರಿನ ಕಳ್ಳಭಟ್ಟಿ ದುರಂತದಲ್ಲಿ ಮತ್ತು ಗೋಪಿನಾಥಪುರಂನ ದುರ್ಘಟನೆಯಲ್ಲಿ ನಿಧನರಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಕಾಂ. ಎಸ್. ಎಲ್. ಉಪಾಧ್ಯಾಯರು ಸಂತಾಪ ಸೂಚಕ ನಿರ್ಣಯ

(ಕಡೇ ಪುಟ ನೋಡಿ)

ವಿಮರ್ಶೆ :

ವಿಯೆಟ್ನಾಮಿನ ವೀರಗಾಥೆಗಳು

-ಗುಡಿಹಳ್ಳಿ ನಾಗರಾಜ

[“ಕಾಡಿನಲ್ಲಿ ಬೆಳದಿಂಗಳು”: ವಿಯಟ್ನಾಮೀ ಕಥೆಗಳ ಸಂಕಲನ; ವಿಶ್ವಕಥಾಕೋಶ ಸಂಪುಟ-3; ಪ್ರಕಾಶನ: ನವಕರ್ನಾಟಕ ಸಂಸ್ಥೆ; ಪ್ರಧಾನ ಸಂಪಾದಕ: ನಿರಂಜನ; ಬೆಲೆ 10ರೂ.

ವಿಯಟ್ನಾಮಿನಲ್ಲಿ ದಂತಕತೆಯೊಂದಿದೆ. ಗಿಯೊಂಗ್ ಇದರ ನಾಯಕ. ಗಿಯೊಂಗ್ ಹಳ್ಳಿಯ ಈ ಹಸುಳೆಯನ್ನು ಜನ ಗಿಯೊಂಗ್ ಎಂದೇ ಕರೆದರು. ವೈರಿ ದಂಡೆತ್ತಿ ಬಂದಿದ್ದಾನೆಂಬ ಸುದ್ದಿ ತಿಳಿದು ಹುಡುಗ ಯುದ್ಧಕ್ಕೆ ಅಣಿಯಾದ. ದಾರಿಸಾಗುತ್ತ ಹುಡುಗ ಬೆಳೆದ. ಬೆಳೆದು ದೈತ್ಯನಂತಾದ. ಜನ ಸವಾರಿಮಾಡಲು ಗಿಯೊಂಗ್‌ಗೆ ಒಂದು ಕಬ್ಬಿಣದ ಕುದುರೆ, ಕಬ್ಬಿಣದ ಕೋಲು ಮಾಡಿಕೊಟ್ಟರು. ರೈತರು, ಬೆಸ್ತರು, ಬೇಡರು, ಪಶುಪಾಲಕರು ಹೀಗೆ ಎಲ್ಲ ವೃತ್ತಿಯ ಎಲ್ಲ ವಯಸ್ಸಿನ ಜನ ಹಿಂಬಾಲಿಸಿದರು. ವೈರಿಯೊಂದಿಗೆ ಹೋರಾಡಿ, ವೈರಿಗಳನ್ನು ಹೊರಹಾಕಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಿದ.

ಈ ಪುರಾಣ ಕಥೆಯ ಗಿಯೊಂಗ್ ವಿಯಟ್ನಾಮಿ ಜನರ ಪಾಲಿಗೆ ಒಬ್ಬ ವೀರಪುರುಷ: ಪ್ರತಿಭಟನೆಯ ಹಾಗೂ ವಿಜಯದ ಸಂಕೇತ.

ಆಧುನಿಕ ವಿಯಟ್ನಾಮಿ ಕಥೆಗಾರರಿಗೆ ಈ ದಂತಕಥೆ ಸ್ಫೂರ್ತಿಯ ಸೆಲೆ, ಪರಂಪರೆಯ ಎಳೆ. ಈ ಜನ ಪ್ರಪಂಚೇತಿಹಾಸದಲ್ಲಿ ಬರೆದಿಡಬಹುದಾದ ವಿರೋಚಿತ ಹೋರಾಟವೊಂದನ್ನು ಮೊನ್ನೆಮೊನ್ನೆ ನಡೆಸಿದರು. ಇಂತಹ ಸಂದರ್ಭದಲ್ಲಿ ಮೂಡಿಬಂದ ಸಾಹಿತ್ಯ ವಿಶ್ವದ ಸಾಹಿತ್ಯಕ್ಕೆ ವಿಶಿಷ್ಟವಾದ ಹುರುಪು, ಪ್ರೋತ್ಸಾಹ ಕೊಡುವಂತಹದು. ಸಾಮ್ರಾಜ್ಯಶಾಹಿಗಳ ನೊಗದಡಿಯಲ್ಲಿ ಸಿಕ್ಕು ನಲುಗುವ ಅಡಕತ್ತಿನೊಳಗೆ ಈ ಜನರಲ್ಲಿ ಅರಳುವ ದೇಶಪ್ರೇಮ, ಮಾನವೀಯತೆ ಸಂಗಾತಿಗಳೊಂದಿಗಿನ ಸಂಬಂಧ ಇಡೀ ವಿಶ್ವಕ್ಕೆ ಆದರ್ಶಪ್ರಾಯ. ದೇಶಪ್ರೇಮವೆಂದರೆ ಹೀಗಿರಬೇಕು ಎನ್ನುವಂತಿವೆ ಇಲ್ಲಿಯ ಕಥೆಗಳು. ಈ ಎಲ್ಲಾ ಕಥೆಗಳೂ ಮಹಾಕಾವ್ಯಕ್ಕೆ ವಸ್ತುವಾಗುವ ಯೋಗ್ಯತೆಪಡೆದಿವೆ. ಇಂತಹ ಅದ್ಭುತ ರೋಮಾಂಚಕಾರಿ ಕತೆಗಳನ್ನು ನಾನೆಲ್ಲೂ ನೋಡಿಲ್ಲ. ಅಮೇರಿಕಾದ ಧ್ವಂಸಕ್ಕೆ ಬಲಿಯಾದವರನ್ನು ಸ್ವಲ್ಪ ಗಮನಿಸಿ: “ಸತ್ತವರ ಅಂದಾಜು ಸುಮ್ಮ ನಾಲ್ಕು ಲಕ್ಷದ ಮೂವತ್ತು ಸಾವಿರ, ಗಾಯಗೊಂಡವರು, ಇಲ್ಲವಾದವರು ಹದಿನಾಲ್ಕು ಲಕ್ಷದ ಮೂವತ್ತು ಸಾವಿರ, 8 ಲಕ್ಷ ತಬ್ಬಲಿಗಳು, 10 ಲಕ್ಷ ವಿಧವೆಯರು ಸುಮಾರು 5 ಲಕ್ಷ ಅಂಗವಿಕಲರು, ಮೂವತ್ತು ಲಕ್ಷಕ್ಕೂ ಹೆಚ್ಚು ನಿರುದ್ಯೋಗಿಗಳು. ಮೂರರಲ್ಲಿಎರಡರಷ್ಟು ಹಳ್ಳಿಗಳ ಮೇಲೆ ಬಾಂಬ್ ದಾಳಿ... “ಹೀಗೆಯೇ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಅಂತೂ 21 ವರ್ಷ ಅಮಾನುಷ ಕೃತ್ಯಗಳನ್ನು ಎಸಗಿದ ಮೇಲೆ ಅಮೇರಿಕ ವಿಯಟ್ನಾಮಿನಿಂದ ಕಾಲ್ತೆಗೆಯಿತು. 25,50,000 ಟನ್ ಬಾಂಬುಗಳು ತನ್ನ ಮೇಲೆ ಸುರಿದರೂ ನಿರ್ನಾಮವಾಗಿರಲಿಲ್ಲ. ದುಡಿಮೆಯ ಜೀವಗಳ ಬಡದೇಶ ಪುರುಷರು, ಮಹಿಳೆಯರು ಹೆಗಲಿಗೆಹೆಗಲುಕೊಟ್ಟು ಹೊಸ ನಾಡೊಂದನ್ನು ಕಟ್ಟಿದರು. ಸಾಹಿತ್ಯದಲ್ಲಿ ದೇಶಪ್ರೇಮ ಮತ್ತು ರಾಜನಿಷ್ಠೆ ಮರೆಯಾಗಿ, ಆ ಸ್ಥಾನದಲ್ಲಿ ದೇಶಪ್ರೇಮ ಮತ್ತು ಜನತೆಯ ಬಗೆಗೆ ಒಲವು ಬೇರೂರಿದವು.

ಇಂತಹ ಸಂಕ್ರಮಣ ಕಾಲದಲ್ಲಿ ಮೂಡಿಬಂದ ಇಲ್ಲಿಯ ಕಥೆಗಳು ಪ್ರಪಂಚದ ಎಲ್ಲಾ ವಸಾಹತುಶಾಹಿ, ಭೂಮಾಲಿಕ-ಬಂಡವಾಳಶಾಹಿ ರಾಷ್ಟ್ರಗಳಿಗೆ ಆದರ್ಶಪ್ರಾಯ. ‘ಕಾಡಿನಲ್ಲಿ ಬೆಳದಿಂಗಳು’ ಟ್ರಕ್ ಡ್ರೈವರ್‌ನೊಬ್ಬ ದೇಶಕ್ಕಾಗಿಹೋರಾಡುವ ಕಠಿಣವಾದ ಸಂದರ್ಭದಲ್ಲಿ ತನ್ನ ಸಂಗಾತಿಯೊಂದಿಗೆಕೂಡುವ ಸಂದರ್ಭದಲ್ಲಿ ತೋರುವ ಸಂಯಮ-ಆ ಸಂಗಾತಿಯೂ ವೀರ ಮಹಿಳೆಯಾಗಿ ಮುನ್ನುಗ್ಗುವುದು ಭೂಮಾಲೀಕ-ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಹಿಳೆ ಬರೀ ಉಪಭೋಗದ ವಸ್ತು. ಸಾರ್ವಜನಿಕ ಜೀವನದಲ್ಲಿ ಆಕೆಯನ್ನು ನೀವೆಲ್ಲೇ ಕಾಣಲಿ-ಕಂಡರೂ ಬರೀ ಅಲಂಕಾರದ ವಸ್ತುವಾಗಿ ಮಾತ್ರ. ಆದರೆ ಸಮಾಜವಾದೀ ಹೋರಾಟದಲ್ಲಿ ಆಕೆಯನ್ನು ರಾಷ್ಟ್ರವನ್ನು ಕಟ್ಟುವ ವೀರ ಮಹಿಳೆಯಾಗಿ ಕಾಣಬಹುದು. ‘ದೂರದ ತಾರೆಗಳು’ ಮೂವರು ಮಹಿಳೆಯರು ರಸ್ತೆಕಟ್ಟುವ, ಯುದ್ಧದಲ್ಲಿ ಪಾಲ್ಗೊಳ್ಳುವ ಚಿತ್ರವನ್ನು ಚಿತ್ರಿಸುವ ಕಥೆ. ಎಂತಹ ಇಕ್ಕಟ್ಟಿನ ಸಮಯದಲ್ಲೂ ಧೃತಿಗೆಡದೆ ಮಗುವನ್ನು ಸಂರಕ್ಷಿಸುವ ಅದನ್ನು ತಾಯಿಗೊಪ್ಪಿಸಬೇಕಾದಾಗ ಬರುವ ‘ಶಾಯೀಯುಕದಳ’ನ ಚುರುಕು ಕಟ್ಟುವ ಕಥೆಯನ್ನು ‘ತಾಯಿಯ ಕರುಳು’ ದಾಖಲೆಗೊಳಿಸುತ್ತದೆ. ಮಾನಸಿಕ, ದೈಹಿಕ ಶ್ರಮಕ್ಕೆ ಜತೆಗೆ ಹೃದಯವನ್ನು ಅರಳಿಸುವಂತ ಸಂಗಾತಿಗಳ ಸಂಬಂಧವನ್ನು ‘ಕಿಡಿಗಳು’ ಕಥೆ ಹೇಳುತ್ತದೆ. ಪ್ರೇಮದ ಎಳೆ ತಳತೆ ಸದಾ ಹಸಿರಾಗಿರುವ ಅದರ ಗುಣವನ್ನು ವಯಸ್ಸಿನ ಅಂತರ ಅಳಿಸಿಹಾಕದು ಎನ್ನುವುದನ್ನು ಸಾಧಿಸುವ ಕತೆ ‘ಸಮೆಯದ ದಾರಿಯಲ್ಲಿ’ ಸಮಾಜವಾದಿ ರಾಷ್ಟ್ರಗಳಲ್ಲಿ ಮಹಿಳೆಯೂ ತನ್ನೆಲ್ಲ ಸಾಮರ್ಥ್ಯಗಳೊಂದಿಗೆ ಅಭಿವ್ಯಕ್ತಿಸಿಕೊಳ್ಳಬಲ್ಲಳೆಂಬುವ ಸತ್ಯವನ್ನು ಸಾರುವ ಕತೆ. ‘ಅಡಿಕೆ ಮರಗಳ ಸುವಾಸನೆ’ ಸೈನ್ಯವೊಂದರಲ್ಲಿ ರಾಜಕೀಯ ಸಲಹೆಗಾರಳಾಗಿ ನ್ ವಹಿಸುವ ಪಾತ್ರ ಈಕೆಗೆ ಪೂರಕವಾಗಿ ಈಕೆಯ ಅತ್ತಿಗೆ ಪುಕ್ ಒಬ್ಬ ಯೋಧೆ ಹಾಗೂ ಹೆಂಡತಿಯಾಗಿ ಎಲೆಮರೆಯ ಕಾಯಿಯಂತೆ ನಿರ್ವಹಿಸುವ ಪಾತ್ರ ಅಮೋಘವಾದದು. ಫ್ರೆಂಚರ ವಸಾಹತುವಾಗಿದ್ದ ಕಾಲಕ್ಕೆ ಪ್ರಜೆಗಳು ಭೋಜನ ತೆವಲು ತೀರಿಸಲು ಮಾತ್ರ ಅರ್ಹರು ಎಂದು ತಾವೇ ಆರೋಪಿಸಿಕೊಂಡ ಆಡಳಿತಗಾರರ ಪೊಳ್ಳುತನ ಬಯಲು ಮಾಡುವ ಕಥೆ ಕ್ರೀಡಾ ಪ್ರೇಮ. ‘ಮಗ’ ಕಥೆಯಲ್ಲಿ ಬ ಹೆಂಡತಿಗೆ ಹೇಳುತ್ತಾನೆ. “ಕ್ರಾಂತಿಯೇ ನಮಗೆ ಭೂಮಿಯನ್ನು ಕೊಟ್ಟದ್ದು. ಅದ್ದರಿಂದಲೇ ನಾವು ಮಗನನ್ನು ಸಾಕಲಿಕ್ಕೆ ಸಾಧ್ಯವಾದದ್ದು. ಅವನು ನಮ್ಮ ಒಬ್ಬನೇಮಗ ಏನು ಮಾಡೋಕೆ ಸಾಧ್ಯ, ಅವನು ವಿಮೋಚನಾ ಸೇನೆಯ ಜತೆ ಹೋಗಲಿ ಅವರು ಅವನನ್ನು ಒಬ್ಬ ಮನುಷ್ಯನನ್ನಾಗಿ ಮಾಡ್ತಿಯಾರು. ಅವನ ಕೈಗೆ ಬಂದೂಕು ಕೊಟ್ಟಾರು ಕೊಡಲಿ, ಅದನ್ನ ಅವನು ಈ ದೇಶದ್ರೋಹಿಗಳನ್ನ ಕೊಲ್ಲೋಕೇಂತ ಹಾರಿಸ್ತಾನೆ ಹೋರಾಡುತ್ತಾ ಅವನು ಸತ್ತರೂ ನನಗೆ ಸಂತೋಷವೆ” ಹೀಗೆ ಕೃತಕೃತ್ಯತೆಯ, ಸಂತೃಪ್ತಿಯ ಭಾವನೆಯಿಂದ ಮಗನನ್ನು ಕ್ರಾಂತಿಕಾರಿ ಹೋರಾಟಕ್ಕೆ ಸಮರ್ಪಿಸುತ್ತಾನೆ. ಕಡಿದಷ್ಟು ಚಿಗುರುವ ಕ್ಸನು ಮರಗಳಂತೆ ಅಂತಿಮ ವಿಜಯದಲ್ಲಿ ಸಂಪೂರ್ಣ ನಂಬುಗೆಯಿಟ್ಟ ಕ್ರಾಂತಿಕಾರಿಗಳ ತೊಟ್ಟಿಕ್ಕುವ ಒಂದೊಂದು ಹನಿ ರಕ್ತವೂ ರಕ್ತ ಬೀಜಾಸುರನ ವಂಶದಂತೆ ಬೆಳೆಯುತ್ತದೆ. ಕೊನೆಗೆ ಮಹಾಪೂರವಾಗಿ ಹರಿಯುತ್ತದೆ:– ‘ಕ್ಸನು ಮರಗಳ ಕಾಡು ಕಥೆಯಲ್ಲಿ. ವಿಮೋಚನಾದಳದ ಕಮ್ಯುನಿಸ್ಟರನ್ನು ಕಂಡಲ್ಲೇ ಗುಂಡಿಕ್ಕುವ ಕುನ್ನಿಗಳು ಅವರ ಸ್ಥೈರ್ಯ, ನಿಷ್ಠೆಯನ್ನೆಂದೂ ಧ್ವಂಸ ಮಾಡಲಾರರು. ಕಥಾನಾಯಕ ಥೂನ ಹೆಂಡತಿ ಮಕ್ಕಳನ್ನೆಲ್ಲ ಅವನ ಎದುರಿನಲ್ಲೇ ಧ್ವಂಸ ಮಾಡಿದ್ದಾರೆ. ಇಷ್ಟಾದರೂ ತೀರದು ಅವರ ರಕ್ತದಾಹ. “ಥೂನ ಒಂದು ಬೆರಳು ಹೊತ್ತಿ ಉರಿಯಿತು. ಅದಕ್ಕೆ ಅಂಟಿಕೊಂಡೇ ಇನ್ನೊಂದು, ಮತ್ತೊಂದು. ಕ್ಸನು ರಾಳವು ಶೀಘ್ರವಾಗಿ ಉರಿಯುವ ವಸ್ತು ಈಗ ಥೂನ ಬೆರಳುಗಳು ಬೆರಳುಗಳಲ್ಲ, ಧಗಧಗ ದಹಿಸುವ ಪಂಜುಗಳು ಅವನ ಬೆರಳುಗಳು ಮಾತ್ರವೆ? ಇಲ್ಲ. ಅವನ ಪುಪ್ಪುಸಗಳಲ್ಲಿ ಕರುಳಿನಲ್ಲಿ ಕೂಡ ಅಸಹನೀಯ ಉರಿ. ಆದರೂ ಅವನು ತುಟಿಯನ್ನು ಬಿಗಿಹಿಡಿದೇ ಇದ್ದ. ಬಾಯಲ್ಲಿ ಕಹಿರುಚಿಯ ಅನುಭವವಾಯಿತು ರಕ್ತ. ಅವನು ತುಟಿಗಳನ್ನು ಬಲವಾಗಿ ಕಚ್ಚಿಬಿಟ್ಟಿದ್ದ. ಊಹೂಂ ಅವನು ಕೂಗಿಕೊಳ್ಳಲಿಲ್ಲ. ಕ್ವಯಟ್ ಹೇಳಿದ್ದ, ಒಬ್ಬ ಕಮ್ಯುನಿಸ್ಟ್ ಯಾವತ್ತೂ ದಯೆಗಾಗಿ ಭಿಕ್ಷೆ ಬೇಡುವುದಿಲ್ಲ. ನಾನು ಎಂದೂ ದಯಾಯಾಚನೆ ಮಾಡುವುದಿಲ್ಲ. ಥೂ ಮನಸ್ಸು ಗಟ್ಟಿಮಾಡಿಕೊಂಡ. ಜ್ವಾಲೆಗಳು ಕರುಳುಗಳನ್ನು ಸುಡುತ್ತಿವೆ. ಅಯ್ಯೋ ಕ್ವಿಯೆಟ್ ಅಣ್ಣಾ’ ನಾನು ತಡೆಯಲಾರದೆ ಅರಚಿಕೊಳ್ಳುತ್ತೇನೆಯೋ ? ಊಹೂಂ. ಇಲ್ಲ ಎಂದಿಗೂ ಇಲ್ಲ”. ಕೊನೆಗೆ ಈ ಕೂಗಿನ ಜತೆಗೆಯೇ ಜನಪ್ರವಾಹ ಮಹಾಪೂರವಾಗಿ ಹರಿಯುತ್ತದೆ. ಸುಲಿಗೆಕೋರರ ಮೇಲೆ ಸೇಡು ತೀರಿಸಿಕೊಳ್ಳುತ್ತದೆ. ಅಪ್ಪನ ಹೋರಾಟದ ಪರಂಪರೆಯನ್ನು ಮಗಳು ಮುಂದುವರೆಸುವ ಕಥೆ ದಂತದ ಹಣಿಗೆ.

ಸದಾ ಬಾಂಬ್ ದಾಳಿಯಡಿಯಲ್ಲಿ ಜರ್ಜರಿತರಾಗಬೇಕಿದ್ದ ಈ ಪುಟ್ಟ ದೇಶದ ಜನರು ಅಂತಿಮ ವಿಜಯದತ್ತ ನಿಶ್ಚಯದಿಂದ ಸಾಗುವುದನ್ನು ನೋಡಿದರೆ ಒಂದು ಕ್ಷಣ ಮೂಕವಿಸ್ಮಿತರಾಗುತ್ತೇವೆ. ಯುದ್ಧ ಜೀವನದ ಒಂದು ಭಾಗ ಆಗಿಹೋದ ಮೇಲೆ ಅದರ ಹೆದರಿಕೆ ಎಲ್ಲಿಂದ ಬಂತು ? ಸಾವಿನಂಚಿನಲ್ಲಿದ್ದರೂ ಅವರು ನಗುತ್ತಿರಬಲ್ಲರು. ಪ್ರತಿಯೊಂದು ಸಾವೂ ವಿಜಯದೆಡೆಗೆ ಮುನ್ನಿಟ್ಟ ಹೆಜ್ಜೆಯೇ ಹೊರತಾಗಿ ಧೈರ್ಯ ಕುಂದಿಸುವ ಘಟನೆಯಲ್ಲ. ವಿಮೋಚನಾ ಹೋರಾಟಕ್ಕೆ ಇಡೀ ಜನಸಮುದಾಯ ತನ್ನ ರಾಷ್ಟ್ರಕ್ಕೆ ಒಪ್ಪಿಸಿಕೊಂಡಿರುವುದನ್ನು ನೋಡಿದರೆ ಹುರುಪು ಹುಚ್ಚೆದ್ದು ಕುಣಿಯುತ್ತದೆ. ಮಹಿಳೆಯರೂ ಪುರುಷನೊಂದಿಗೆ ಹೆಗಲಿಗೆ ಹೆಗಲುಕೊಟ್ಟು ಭಾಗವಹಿಸಿರುವುದನ್ನು ವಿಯಟ್ನಾಮಿನಂತೆ ವಿಮೋಚನೆಯ ಅಂಚಿನಲ್ಲಿರುವ ಮತ್ತೊಂದು ರಾಷ್ಟ್ರಕ್ಕೆ ಅನುಕರಣಾರ್ಹವಾಗಿದೆ. ಮಹಿಳೆಯರೂ ಭಾಗವಹಿಸದೆ ಕ್ರಾಂತಿಯೆಂದೂ ಸಫಲವಾಗದು ಎನ್ನುವ ಲೆನಿನ್ ಮಾತನ್ನು ಇಲ್ಲಿಯ ಜನ ಸಫಲಗೊಳಿಸಿದ್ದಾರೆ. ಒಟ್ಟಿನಲ್ಲಿ ಇಲ್ಲಿಯ ಪ್ರತಿಯೊಂದು ಕಥೆಯೂ ವಿಯಟ್ನಾಮೀಯರ ಅದಮ್ಯ ಸ್ಥೈರ್ಯ ದೇಶಪ್ರೇಮ, ಪರಸ್ಪರ ಅನುಕಂಪಗಳ ವೀರಗಾಥೆಯಾಗಿ ಹರಿಯುತ್ತವೆ.

ದಿವೋಲಿ ಹತ್ಯಾಕಾಂಡ

ದಿನನಿತ್ಯ ಕೊಲೆಸುಲಿಗೆ, ದರೋಡೆಗಳಿಗೆ ಹೆಸರು ವಾಸಿಯಾದ ಉತ್ತರ ಪ್ರದೇಶದ ಇತಿಹಾಸದಲ್ಲೇ ಅತ್ಯಂತ ಭೀಕರ ಘಟನೆ ದಿವೋಲಿಯಲ್ಲಿ ನಡೆದಿದೆ. ನವೆಂಬರ್ 18ರಂದು ದಿವೋಲಿ ಗ್ರಾಮದಲ್ಲಿ ಶಸ್ತ್ರಸಜ್ಜಿತ ಗೂಂಡಾಗಳು 24 ಹರಿಜನರನ್ನು ಗುಂಡಿಕ್ಕಿ ಕೊಂದಿದ್ದಾರೆ. ನವೆಂಬರ್ 28ರಿಂದ 30ರವರೆಗೆ ದೆಹಲಿಯಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ದಿವೋಲಿ ಹತ್ಯಾಕಾಂಡದ ಕುರಿತು ತನ್ನ ತೀವ್ರ ಕಳವಳ ವ್ಯಕ್ತಪಡಿಸಿದೆಯಲ್ಲದೇ ಘಟನೆಗೆ ಕಾರಣರಾದವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದೆ.

ಉ. ಪ್ರ. ದಲ್ಲಾಗಲೀ ಬಿಹಾರದಲ್ಲಾಗಲೀ ಹರಿಜನರ ಮೇಲೆ ನಡೆಯುತ್ತಿರುವ ಹಲ್ಲೆಗಳಲ್ಲಿ ಭೂಮಾಲಕರ ನೇರವಾದ ಕೈವಾಡವಿದೆ. ಅಲ್ಲದೇ ತಮ್ಮ ನ್ಯಾಯಬದ್ಧ ಹಕ್ಕಿಗೋಸ್ಕರ ಹೋರಾಟ ನಡೆಸುತ್ತಿರುವ ಹರಿಜನ ಕೃಷಿಕೂಲಿಕಾರರನ್ನು “ಉಗ್ರಗಾಮಿಗಳು” ಎಂಬ ಹಣೆಪಟ್ಟಿ ಅಂಟಿಸಿ ಪೋಲೀಸರೂ ಬೇಟೆಯಾಡುತ್ತಿದ್ದಾರೆ.

ಈ ಕೂಡಲೇ ಎಲ್ಲ ಭೂಮಾಲಕರಲ್ಲಿರುವ ಶಸ್ತ್ರಾಸ್ತ್ರಗಳನ್ನು ಕೈವಶಪಡಿಸಿಕೊಂಡು ಲೈಸನ್ಸ್‌ಗಳನ್ನು ರದ್ದುಮಾಡಬೇಕೆಂದೂ, ನೊಂದ ದಿವೋಲಿ ಹರಿಜನ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕೆಂದೂ ಕೇಂದ್ರ ಸಮಿತಿ ಒತ್ತಾಯಿಸಿದೆ.

ಬಿನ್ನಿ ಕಾರ್ಖಾನೆ ಸಮಸ್ಯೆ

ಸೌಹಾರ್ದ ಕಾರ್ಯಾಚರಣೆಗೆ ಕ್ರಮ

ಇಂಟಕ್(ಐ) ನಾಯಕ ಡಿ. ವೆಂಕಟೇಶ್ ಬಿನ್ನಿಮಿಲ್ ಆಡಳಿತವರ್ಗದೊಂದಿಗೆ ಮಾಡಿಕೊಂಡ ಕಾರ್ಮಿಕ ದ್ರೋಹಿ ಒಪ್ಪಂದವನ್ನು ಬಿನ್ನಿಕಾರ್ಮಿಕರು ಪ್ರತಿಭಟಿಸುತ್ತಿದ್ದಾರೆ. ಒಪ್ಪಂದದ ತಲೆಬುಡ ತಿಳಿಯದೇ “ಒಪ್ಪಂದಕ್ಕೆ ಒಪ್ಪಿರುವೆ” ವೆಂಬ ಪತ್ರಕ್ಕೆ ಸಹಿ ಹಾಕಲು ಬಿನ್ನಿಕಾರ್ಮಿಕರು ನಿರಾಕರಿಸುತ್ತಿದ್ದಾರೆ.

ದಿನಾಂಕ 9-12-81 ರಂದು ಎಲ್ಐಸಿ ಕ್ವಾರ್ಟರ್ಸಿನಲ್ಲಿ ಬೆಂಗಳೂರು ನಗರ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸಭೆಸೇರಿ ಬಿನ್ನಿಮಿಲ್ ನೌಕರರ ಬೆಂಬಲಾರ್ಥ ಸೌಹಾರ್ದ ಕಾರ್ಯಕ್ರಮ ರೂಪಿಸಲು ನಿರ್ಧರಿಸಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿ 19-12-81 ರಂದು ನಗರದ ಶಿರಸಿ ವೃತ್ತದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಿದೆ. ಬಿನ್ನಿಮಿಲ್ ನೌಕರರ ಬೆಂಬಲಾರ್ಥ ನಿರ್ಣಯಗಳನ್ನು ಅಂಗೀಕರಿಸುವಂತೆ ಎಲ್ಲ ಕಾರ್ಮಿಕ ಸಂಘಗಳಿಗೆ ಮನವಿ ಮಾಡಲಾಗಿದೆ.

ಕಾಂ. ಇ. ಎಂ. ಎಸ್.ರ ಕರೆ

ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ ಶ್ರಮಿಸಿ

[ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯಸಮ್ಮೇಳನವು ಮಂಗಳೂರಿನಲ್ಲಿ ಡಿ. 11ರಿಂದ 14ರ ವರೆಗೆ ನಡೆಯಿತು. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದಿರಿಪಾಡ್‌ರು ಸಮ್ಮೇಳನವನ್ನು ಉದ್ಘಾಟಿಸಿದರು. ರಾಷ್ಟ್ರೀಯ-ಅಂತರ್ರಾಷ್ಟ್ರೀಯ ಪ್ರಸಕ್ತ ರಾಜಕೀಯ ಪರಿಸ್ಥಿತಿ-ಬೆಳವಣಿಗೆ, ಸಧ್ಯದ ಪರಿಸ್ಥಿತಿಯಲ್ಲಿ ಪಕ್ಷ ನಿರ್ವಹಿಸಬೇಕಾದ ಕರ್ತವ್ಯದ ಕುರಿತು ವಿವರಿಸಿದರು. ಇಂದಿರಾ ಸರಕಾರದ ಧೋರಣೆಯನ್ನು ಕಟುವಾಗಿಟೀಕಿಸಿದ ಕಾಂ. ಇ.ಎಂ.ಎಸ್.ರು ದೇಶದಲ್ಲಿ ಎಡ-ಪ್ರಜಾಪ್ರಭುತ್ವಶಕ್ತಿಗಳನ್ನು ಬಲಪಡಿಸಲು ಶ್ರಮಿಸಬೇಕಾದ ಅಗತ್ಯದ ಕುರಿತು ಒತ್ತಿ ಹೇಳಿದರು. ಕಾಂ. ಇ. ಎಂ. ಎಸ್.ರ ಭಾಷಣದ ಸಾರಾಂಶವನ್ನಿಲ್ಲಿ ಕೊಡಲಾಗಿದೆ.]

"ಕಳೆದ ರಾಜ್ಯಸಮ್ಮೇಳನದಿಂದೀಚೆ ನಾವು ಸಾಧಿಸಿದ್ದೇನು? ನಮ್ಮ ತಪ್ಪು-ಒಪ್ಪುಗಳೇನು? ಜಲಂಧರ ಅಧಿವೇಶನದ ಧೋರಣೆಗಳ ಕಾರ್ಯಗತದ ಕುರಿತು, ಕರ್ನಾಟಕದಲ್ಲಿ ಪಕ್ಷವನ್ನು ವಿಸ್ತರಿಸುವ ಕುರಿತು ಚರ್ಚಿಸಲು ನೀವಿಲ್ಲಿ ಸೇರಿದ್ದೀರಿ."

"ಜನವರಿ ತಿಂಗಳಲ್ಲಿ ವಿಜಯವಾಡಾದಲ್ಲಿ ನಡೆಯಲಿರುವ ಅಖಿಲ ಭಾರತ ಪಕ್ಷದ ಅಧಿವೇಶನದ ಪೂರ್ವಭಾವಿಯಾಗಿ ಕೇಂದ್ರಸಮಿತಿಯು ಪರವಾಗಿ 'ರಾಜಕೀಯ ನಿರ್ಣಯ' (Political Resolution)ದ ಕರಡು ವರದಿಯನ್ನು ಹೊರತರಲಾಗಿದೆ. ಅದನ್ನು ಕೂಲಂಕುಷವಾಗಿ ಚರ್ಚಿಸಿ ಟೀಕೆ-ಟಿಪ್ಪಣಿ-ಸಲಹೆಗಳನ್ನು ಕೇಂದ್ರಸಮಿತಿಗೆ ಕಳಿಸಿಕೊಡಬಹುದು. ಪ್ರತಿಯೊಂದು ಘಟಕಗಳ, ಸದಸ್ಯರ ಟೀಕೆ-ಟಿಪ್ಪಣಿ-ಸಲಹೆಗಳನ್ನು ವಿಜಯವಾಡಾ ಸಮ್ಮೇಳನದಲ್ಲಿ ಚರ್ಚಿಸಲಾಗುವುದು. ನಮ್ಮ ಪಕ್ಷದ ಕಾರ್ಯಕ್ರಮ-ಧೋರಣೆ ಕಾರ್ಯಗತವಾಗುವುದು ಈ ರೀತಿಯ ಸಾಮೂಹಿಕ ತೀರ್ಮಾನಗಳಿಂದ. ಇದಕ್ಕೇ ಕೇಂದ್ರೀಯ ಪ್ರಜಾಪ್ರಭುತ್ವವೆನ್ನುವುದು. ಒಬ್ಬ ವ್ಯಕ್ತಿಯ ತೀರ್ಮಾನಕ್ಕೆ ಪಕ್ಷ ಬದ್ಧವಲ್ಲ. ವ್ಯಕ್ತಿಯ ತ್ಯಾಗ, ಅನುಭವಗಳನ್ನು ಪರಿಗಣಿಸುವುದು ಅವಶ್ಯವಾಗಿದ್ದರೂ ಸಹ ಒಬ್ಬ ವ್ಯಕ್ತಿಯ ಮೇಲೆ ಮಾತ್ರ ಪಕ್ಷ ಅವಲಂಬಿತವಾಗಿರಕೂಡದು" ಎಂದ ಕಾಂ. ಇ. ಎಂ. ಎಸ್.ರು ಕಾಂಗ್ರೆಸ್ ಇಬ್ಭಾಗವಾದ ಮೇಲೆ ಪಕ್ಷದ ಅಧ್ಯಕ್ಷರು ಬದಲಾದಂತೆಲ್ಲ ಅವರವರ ಹೆಸರಿನಲ್ಲಿ ಪಕ್ಷದ ಹೆಸರೂ ಬದಲಾಗುತ್ತ ಬಂದಿದ್ದನ್ನು ಉದಹರಿಸಿದರು.

"ಕರಡು ರಾಜಕೀಯ ವರದಿ ಈಗಾಗಲೇ ನಿಮ್ಮದಾಗಿರುವುದರಿಂದ ನಾನು ಆ ಕುರಿತು ವಿವರಿಸಲು ಹೋಗುವುದಿಲ್ಲ. ಜಲಂಧರ ಸಮ್ಮೇಳನದಲ್ಲಿ ಕೈಗೊಳ್ಳಲಾದ ಎರಡು ಮಹತ್ವದ ನಿರ್ಣಯಗಳಾದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಮತ್ತು ಎರಡನೇಯದು ವಿಶಾಲವಾದ ಸರ್ವಾಧಿಕಾರೀ ವಿರೋಧಿ ವೇದಿಕೆಗಳ ಕುರಿತು ವಿವರಿಸುವೆ."

"ಸ್ವಾತಂತ್ರ್ಯಾನಂತರ ಆಡಳಿತ ನಡೆಸಿದ ಎಲ್ಲಾ ಭೂಮಾಲಕ ಬಂಡವಾಳಶಾಹಿ ಪಕ್ಷಗಳು ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಸಂಪೂರ್ಣವಾಗಿ ವಿಫಲರಾದಾಗ ನಾವು ಈ ಘೋಷಣೆಗಳನ್ನು ಹೊರಡಿಸಿದೆವು. 34 ವರ್ಷಗಳ ಹಿಂದೆ ಬ್ರಿಟಿಷರನ್ನು ಹೊರಗಟ್ಟಿ ಸ್ವಾತಂತ್ರ್ಯ ಪಡೆದ ಮೇಲೆ ಈಗಿನ ನಮ್ಮ ಸ್ಥಿತಿಯೇನು? ಪ್ರಧಾನಿ ಇಂದಿರಾ ಮತ್ತು ವಿತ್ತ ಮಂತ್ರಿ ವೆಂಕಟರಾಮನ್ ವಿದೇಶಗಳಲ್ಲಿ ಭಿಕ್ಷೆಎತ್ತುತ್ತಿದ್ದಾರೆ. 34 ವರ್ಷಗಳ ಹಿಂದೆ ಸ್ವದೇಶಿ ಮತ್ತು ಸ್ವರಾಜ್ಯ ಘೋಷಣೆ ಳನ್ನು ಮೊಳಗಿಸಿ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನ ಗುಂಡೇಟನ್ನು, ಲಾಠೀಪೆಟ್ಟನ್ನು ಎದುರಿಸಿದರು. ಹುತಾತ್ಮರಾದರು. ಸ್ವಾತಂತ್ರ್ಯ ಪಡೆದ ನಂತರ ನಮ್ಮ ಕಾಲ ಮೇಲೆ ನಾವು ನಿಲ್ಲುತ್ತೇವೆಂಬ ನಿರ್ಧಾರ ಇಂದು ಏನಾಗಿದೆ? ಕೈಗಾರಿಕೀಕರಣ, ವ್ಯವಸಾಯ ಅಭಿವೃದ್ಧಿ, ಜನಕಲ್ಯಾಣಕ್ಕೆ ಶ್ರಮಿಸುವೆವೆಂದು ಆಗ ನಮ್ಮ ಮುಖಂಡರು ಭರವಸೆ ನೀಡಿದ್ದರು. ಭೂಮಾಲಕ ಬಂಡವಾಳಶಾಹಿ ಪಕ್ಷಗಳ ಈ ಮುಖಂಡರಿಂದ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲವೆಂದು 34 ವರ್ಷಗಳ ಹಿಂದೆಯೇ ನಾವು (ಕಮ್ಯುನಿಸ್ಟರು) ಹೇಳಿದ್ದೆವು. ದೇಶವನ್ನು ದಿವಾಳಿಯೆಬ್ಬಿಸುವ ಸಾಧ್ಯತೆಯಿದೆಂದೂ ಹೇಳಿದ್ದೆವು ಅದಿಂದು ನಿಜವಾಗಿದೆ ಎಂದು ಹೇಳಲು ನಾನು ಸಂತೋಷಪಡುವುದಿಲ್ಲ" ಎಂದು ಕಾಂ. ಇ. ಎಂ. ಎಸ್. ತಿಳಿಸಿದರು.

ಐ. ಎಂ. ಎಫ್.

"ನಮ್ಮ ಸ್ವಾಭಿಮಾನ-ರಾಷ್ಟ್ರ ಗೌರವಗಳನ್ನು ವಿದೇಶಗಳಿಗೆ ಒತ್ತೆ ಇಟ್ಟು ಐ. ಎಂ. ಎಫ್.ನಿಂದ ಕೋಟ್ಯಾಂತರ ರೂ. ಹಣವನ್ನು ಸಾಲ ತೆಗೆದುಕೊಳ್ಳಲು ಇಂದಿರಾ ಸರಕಾರ ಮುಂದಾಗಿದೆ. ಇದಕ್ಕೋಸ್ಕರ ಅಪಮಾನಕಾರೀ ಷರತ್‌ಗಳನ್ನು ಒಪ್ಪಿಕೊಳ್ಳಲಾಗಿದೆ. ಕೇವಲ ಬುದ್ಧಿಜೀವಿಗಳು, ಶಿಕ್ಷಣವೇತ್ತರು ಮಾತ್ರ ಐ. ಎಂ. ಎಫ್. ಕುರಿತು ಚರ್ಚಿಸಿದರೆ ಸಾಲದು. ದೇಶದ ಕೋಟ್ಯಾಂತರ ಶ್ರಮಜೀವಿಗಳನ್ನು ಬಾಧಿಸತಕ್ಕ ವಿಚಾರವಿದಾಗಿರುವುದರಿಂದ ಈ ಕುರಿತು ಸೂಕ್ತ ಚರ್ಚೆಯಾಗಬೇಕು."

"ಎರಡು ದಿನಗಳ ಹಿಂದೆ ತಾನೇ ರೇಲ್ವೆ ಮಂತ್ರಿ ಕೇದಾರಪಾಂಡೆಯವರು ರೇಲ್ವೆ ಸರಕುಗಳ ಸಾಗಾಣಿಕೆ ದರವನ್ನು ಶೇ. 15ರಷ್ಟು ಹೆಚ್ಚಿಸಿದ್ದಾರೆ. ಈ ಕ್ರಮ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆ, ಕೃಷಿ ವ್ಯವಸಾಯ ಸಾಮಗ್ರಿಗಳ ಬೆಲೆಗಳ ಮೇಲೆ ಪರಿಣಾಮ ಬೀರಿ ಶೇ. 25ರಿಂದ ಶೇಕಡ 30 ರಷ್ಟು ಬೆಲೆಗಳು ಹೆಚ್ಚಾಗಲಿವೆ. ಈ ಕುರಿತು ಪಾರ್ಲಿಮೆಂಟ್‌ನಲ್ಲಿ ಪ್ರಶ್ನಿಸಿದಾಗ ರೇಲ್ವೆ ಮಂತ್ರಿ ಸೂಕ್ತ ಉತ್ತರ ನೀಡಿಲ್ಲ. 1982 ಫೆಬ್ರುವರಿಯಲ್ಲಿ ರೇಲ್ವೆ ಬಜೆಟ್ ಮಂಡಿಸುವದಿದ್ದಾಗ್ಯೂ ಡಿಸೆಂಬರ್‌ನಲ್ಲೇ ಸರಕು ಸಾಗಾಣಿಕೆ ದರ ಹೆಚ್ಚಿಸಲಾಗಿದೆ. ಇದರ ಹಿಂದೆ ಇರುವ ವಾಸ್ತವ ಸಂಗತಿ ಏನೆಂದರೆ ಜನವರಿಯಲ್ಲಿ ಐ. ಎಂ. ಎಫ್. ನಿಯೋಗ ಪರಿಸ್ಥಿತಿ ಪರಿಶೀಲನೆಗೆ ಭಾರತಕ್ಕೆ ಬರಲಿದ್ದು ಸಾಲದ ಮೊದಲ ಕಂತು (900ಕೋಟಿ ರೂ.) ಬಿಡುಗಡೆ ಮಾಡಲಿದೆ. ಈ ತರಾತುರಿಯಲ್ಲಿ ಐ. ಎಂ. ಎಫ್. ನಿಯೋಗವನ್ನು ತೃಪ್ತಿಪಡಿಸಲು ರೈಲ್ವೆ ಮಂತ್ರಿ ಈ ಕ್ರಮ ಕೈಗೊಂಡಿದ್ದಾರೆ. ಐ.ಎಂ.ಎಫ್. ನಿಯೋಗದ ಭೇಟಿ ಇದೊಂದು ಸಲ ಮಾತ್ರವಲ್ಲ: ಹಿಂದೆ ಬ್ರಿಟಿಷರಿದ್ದಾಗ ಕಂದಾಯ ವಸೂಲಿಗಾಗಿ ಕಲೆಕ್ಟರನ ಸವಾರಿ ಮೇಲಿಂದ ಮೇಲೆ ಆಗಮಿಸುತ್ತಿದ್ದ ರೀತಿಯಲ್ಲಿ ಐ.ಎಂ.ಎಫ್. ನಿಯೋಗ ಬರಲಿದೆ".

"ಕೊರತೆ ಬಜೆಟ್ ಇರಕೂಡದೆಂಬ, ಖರ್ಚು ವೆಚ್ಚ ಸರಿದೂಗಿಸಬೇಕೆಂಬ ಇತ್ಯಾದಿ ಷರತ್‌ಗಳನ್ನು ಐ. ಎಂ. ಎಫ್. ಹೇರಿದೆ. ಅಲ್ಲದೇ ಪ್ರತಿಸಲ ಬಜೆಟ್ ಮಂಡಿಸುವಾಗ ಮತ್ತು ಪಂಚವಾರ್ಷಿಕ ಯೋಜನೆಯೂ ಐ. ಎಂ. ಎಫ್.ನವರ ಪೂರ್ವಾನುಮತಿ ಪಡೆದಿರಬೇಕು. ಇದು ಐ.ಎಂ.ಎಫ್. ಷರತ್ತು".

"ಈಗ ರೇಲ್ವೆ ಮಾತ್ರವಲ್ಲ ಇತರ ವಸ್ತುಗಳ ಕರಗಳೂ ಹೆಚ್ಚಲಿವೆ. ರಿಯಾಯಿತಿ ದರದಲ್ಲಿ ಗೊಬ್ಬರ, ಕೆಲಸಕ್ಕಾಗಿ ಕಾಳು ಈ ಎಲ್ಲ ಸೌಲಭ್ಯಗಳೂ ಇಲ್ಲವಾಗಲಿವೆ. ಗುತ್ತೇದಾರಿ ಬಂಡವಾಳಶಾಹಿಗಳಿಗೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾತ್ರ ರಿಯಾಯಿತಿ ದೊರೆಯಲಿದೆ. ಶ್ರೀ ಸಾಮಾನ್ಯನ ಬದುಕು ದುರ್ಭರವಾಗಲಿದೆ".

"ಐ.ಎಂ.ಎಫ್. ಷರತ್‌ಗಳನ್ನು ಅಂಗೀಕರಿಸುವ ಮೊದಲು ಒಪ್ಪಂದದ ಕರಡನ್ನು ಸಂಸತ್ತಿನೆದರು ಮಂಡಿಸಬೇಕೆಂದು ತಮ್ಮ ಪಕ್ಷದ ಸಂಸತ್ ಸದಸ್ಯರು ವೆಂಕಟ್ರಾಮನ್‌ರನ್ನು ಒತ್ತಾಯಪಡಿಸಿದ್ದರು. ಆದರೆ ವೆಂಕಟ್ರಾಮನ್‌ರಿಂದ ಬಂದ ಉತ್ತರ No (ಇಲ್ಲ) ಎಂದು. ಐ. ಎಂ. ಎಫ್.ನ ಕಾರ್ಯಕಾರೀ ಮಂಡಲಿಯಲ್ಲಿರುವ ತೃತೀಯ ಜಗತ್ತಿನ ರಾಷ್ಟ್ರಕ್ಕೆ ಸೇರಿದ ಸದಸ್ಯರೊಬ್ಬರು ಇಂದಿರಾ ಸರಕಾರವು ದೇಶದ ಜನತೆಯ ಕಣ್ಣಿಗೆ ಮಣ್ಣೆರಚಿ ಸಾಲಪಡೆಯಲು ಅಪಮಾನಕಾರೀ ಷರತ್‌ಗಳನ್ನು ನಡೆಸಿದ ಸಂಚನ್ನು ವಾಷಿಂಗ್‌ಟನ್‌ನಲ್ಲಿರುವ ಹಿಂದೂ ಪತ್ರಿಕೆಯ ವರದಿಗಾರನಿಗೆ ತಿಳಿಸಿದ್ದಾರೆ. ಈ ಷರತ್‌ಗಳು ಭಾರತದ ಜನತೆಗೆ ತಿಳಿದು ಸ್ವಾತಂತ್ರ್ಯಕ್ಕೆ ಧಕ್ಕೆ ತರಲಿರುವ ಈ ಒಪ್ಪಂದದ ವಿರುದ್ಧ ಜಾಗೃತರಾಗಿ ಪ್ರತಿಭಟಿಸಲಿ ಎಂಬುದು ಈ ಸದಸ್ಯರ ಆಶಯ" ಎಂದು ಇ.ಎಂ.ಎಸ್. ತಿಳಿಸಿದರು.

ಅವರು ಮುಂದುವರೆದು "ತಾಂಜಾನಿಯಾ, ಜಮೈಕಾ ಈ ದೇಶಗಳಲ್ಲದೇ ಒಂದು ಸಮಯದಲ್ಲಿ ನಮ್ಮ ನೆರೆಯ ಬಾಂಗ್ಲಾದೇಶವೂ ಸಹ ಐ.ಎಂ.ಎಫ್.ನವರ ಅಪಮಾನಕಾರೀ ಷರತ್‌ಗಳನ್ನು ಒಪ್ಪದೇ ಸಾಲವನ್ನು ನಿರಾಕರಿಸಿದ್ದವು. ಆದರೆ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತ ಐ ಎಂ. ಎಫ್.ನವರೆದುರು ಕೈಯೊಡ್ಡಿದೆ. ಇಷ್ಟಲ್ಲದೇ ಪ್ರಧಾನಿ ಇಂದಿರಾ ಮತ್ತು ವಿತ್ತಮಂತ್ರಿ ವೆಂಕಟರಾಮನ್ ಇವರುಗಳು ಸಂಸತ್‌ನೆದರು ಐ. ಎಂ. ಎಫ್. ನೊಂದಿಗಾಗಲಿದ್ದ ಒಪ್ಪಂದದ ಕರಡನ್ನು ತೋರಿಸಲು ನಿರಾಕರಿಸಿದ್ದರು. ಅಲ್ಲದೇ ನಾವು ಯಾವ ಅಪಮಾನಕಾರೀ ಷರತ್‌ಗಳಿಗೂ ಒಪ್ಪಿಲ್ಲ ಎಂದು ಆಪಾದನೆಗಳನ್ನು ತಳ್ಳಿಹಾಕಿದರು. ನಮ್ಮ ಪಕ್ಷದ ಸಂಸತ್ ಸದಸ್ಯ ಕಾಂ. ಪಿ ರಾಮಮೂರ್ತಿಯವರು ರಾಜ್ಯ ಸಭೆಯಲ್ಲಿ ಅರ್ಥಮಂತ್ರಿಯವರನ್ನು ನೇರವಾಗಿ ಕೇಳಿದರು. ನೀವು ಕರಡನ್ನು ನೋಡುವಿರಾ? ತೋರಿಸಲೇ? ಎಂದು. ವೆಂಕಟರಾಮನ್‌ರ ಮುಖ ಹರಳೆಣ್ಣೆ ಕುಡಿದಂತಾಯಿತು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಐ.ಎಂ.ಎಫ್. ಸಾಲದ ಕುರಿತು ಚರ್ಚೆಯಾಗಬೇಕೆಂದು ಪ. ಬಂಗಾಳ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಒತ್ತಾಯಿಸಿದ್ದಾರೆ. ತೃತೀಯ ಜಗತ್ತಿನ ರಾಷ್ಟ್ರಗಳು ನಿರಾಕರಿಸಿದ ಐ.ಎಂ.ಎಫ್.ನ ಅಪಮಾನಕಾರೀ ಷರತ್‌ಗಳನ್ನು ಭಾರತ ಒಪ್ಪಿದೆ."

"ನಾವು ಪಡೆದ ಸ್ವಾತಂತ್ರ್ಯ ಇದೇ ಏನು? ಐ.ಎಂ.ಎಫ್. ಸಾಲ ಪಡೆದದ್ದು ಜನತೆ ಸ್ವಾತಂತ್ರ್ಯಾನಂತರ ಅಪೇಕ್ಷೆ ಪಟ್ಟಿದ್ದನ್ನು ಅಲ್ಲಗಳೆದ ಹಾಗೆ. ಐ. ಎಂ. ಎಫ್. ಸಾಲದ ವಿಷಯ ಕೇವಲ ನಮಗೆ ಮಾತ್ರವಲ್ಲ. ದೇಶಕ್ಕಾಗಿ ಅಪಾರ ತ್ಯಾಗ ಮಾಡಿದ ಹುತಾತ್ಮರ ಬಲಿದಾನವನ್ನು ವ್ಯರ್ಥ ಮಾಡಿದ ಹಾಗೆ, ಈ ಐ.ಎಂ.ಎಫ್.ನೊಂದಿಗೆ ಮಾಡಿಕೊಳ್ಳಲಾಗಿರುವ ಷರತ್‌ಗಳ ವಿರುದ್ಧ ಸಮಗ್ರ ದೇಶದ ಜನತೆ ಸಿಡಿದೇಳಬೇಕು. ಆಂದೋಲನ ಹೂಡಬೇಕು" ಎಂದು ಇ.ಎಂ.ಎಸ್. ತಿಳಿಸಿದರು.

ಯುದ್ಧದ ಗಂಡಾಂತರ

"ದೇಶದ ಜನತೆ ಎದುರಿಸುತ್ತಿರುವ ಇನ್ನೊಂದು ಗಂಡಾಂತರ ಯುದ್ಧದ್ದು. ರೇಗನ್ ಆಡಳಿತಕ್ಕೆ ಬಂದಮೇಲೆ ವಿಶ್ವಶಾಂತಿಗೆ ಗಂಡಾಂತರ ಹೆಚ್ಚಾಗಿದೆ. ಹಿಂದೂಮಹಾಸಾಗರ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಗಳ ಚಟುವಟಿಕೆ ತೀವ್ರವಾಗಿದೆ. ರೇಗನ್ ಸರಕಾರದ ಪಾಕ್‌ಗೆ F-16 ವಿಮಾನ ಮತ್ತಿತರ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ. ಇದರಿಂದಾಗಿ ನಮ್ಮ ಗಡಿ ಭಾಗ ಗಂಡಾಂತರದಲ್ಲಿದೆ. ರಷಿಯದಿಂದ ಗಂಡಾಂತರವಿದೆ ಎಂಬ ನೆಪಮಾಡಿ ಪಾಕ್‌ನ ಜಿಯಾ ಸರಕಾರ ಅಮೇರಿಕೆಯಿಂದ ಶಸ್ತ್ರಾಸ್ತ್ರ ಪಡೆದಿದೆ. ಈ ಶಸ್ತ್ರಾಸ್ತ್ರ ರಷಿಯಾದ ಆಕ್ರಮಣ ಎದುರಿಸಲಿಲ್ಲ ಬದಲಾಗಿ ಪಾಕ್ ಜನತೆಯನ್ನು, ನೆರೆಯ ಭಾರತದ ಮೇಲೆ ಕಾಲುಕೆದರಿ ಜಗಳ ಹೂಡಲು ಉಪಯೋಗವಾಗಲಿವೆ. ಅಮೇರಿಕನ್ ಸಾಮ್ರಾಜ್ಯಶಾಹಿಯ ಈ ರೀತಿಯ ಪ್ರಚೋದನಕಾರಿ ಕ್ರಮಗಳನ್ನು ಎದುರಿಸಲು ಜನತೆಯನ್ನು ಎಚ್ಚರಿಸಬೇಕು" ಎಂದು ಕಾಂ. ಇ.ಎಂ.ಎಸ್. ತಿಳಿಸಿದರು.

ಐಕ್ಯತೆ-ಸಮಗ್ರತೆಗೆ ಗಂಡಾಂತರ

"ಅಮೇರಿಕನ್ ಸಾಮ್ರಾಜ್ಯಶಾಹಿಯು ನೆರೆಯ ಪಾಕ್‌ಗೆ ಶಸ್ತ್ರಾಸ್ತ್ರ ಪೂರೈಸಿ ಭಾರತ ಉಪಖಂಡದಲ್ಲಿ ಗೊಂದಲವುಂಟು ಮಾಡಿದ್ದಷ್ಟೇ ಅಲ್ಲದೆ ನಮ್ಮ ಜನತೆಯ ಮಧ್ಯೆ ಜಾತಿ-ಭಾಷೆ-ಜನಾಂಗಗಳನ್ನು ಪ್ರಚೋದಿಸುವ ವಿಷ ಬೀಜ ಬಿತ್ತಿ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಡಾಂತರ ತಂದೊಡ್ಡಿದೆ".

"ಗುಜರಾತ್‌ನ ಮೀಸಲಾತಿ ಗಲಭೆ, ಮೊರಾದಾಬಾದ್-ಅಲೀಗಡ್ ಗಲಭೆಗಳು, ಖಲೀಸ್ಥಾನದ ಬೇಡಿಕೆಗಾಗಿ ಪಂಜಾಬ್‌ನಲ್ಲಿ ಮತ್ತು ಅಸ್ಸಾಂನಲ್ಲಿ ನಡೆಯುತ್ತಿರುವ ಪ್ರತ್ಯೇಕತಾ ಚಳುವಳಿ ಇವೆಲ್ಲವುಗಳ ಹಿಂದೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಕೈವಾಡವಿದೆ. ದೇಶದ ಸಮಗ್ರತೆಗೆ ಧಕ್ಕೆಯಾಗಿದೆ."

ಅಸ್ಸಾಂನಲ್ಲಿ ಘಟನೆಗಳು ತೀವ್ರವೇಗದಲ್ಲಿ ನಡೆಯುತ್ತಿವೆ. ಕಾಂಗ್ರೆ ಅಲ್ಪಸಂಖ್ಯಾತರ ಸರಕಾರ ರಚಿಸಲು ಪ್ರಯತ್ನ ನಡೆಯುತ್ತಿವೆ. ಹೊಸದಾಗಿ ಚುನಾವಣೆ ಮಾಡಲಾಗಿಲ್ಲ. ಚುನಾವಣೆ ನಡೆಸಲು ಸರಕಾರ ಅಸಮರ್ಥವಾಗಿದೆ" ಎಂದು ಕಾಂ. ಇ. ಎಂ. ಎಸ್. ತಿಳಿಸಿದರು.

ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆ ಮಾತ್ರ ಪರ್ಯಾಯ

ಪ್ರಸಕ್ತ ಆಡಳಿತೆಯಿಂದಾಗಿ ಪ್ರಜಾಪ್ರಭುತ್ವ ವ್ಯವಸ್ಥೆಗೇ ಧಕ್ಕೆ ಬಂದಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಡಾಂತರ ಒದಗಿದೆ. ತಮ್ಮ ಸಮಸ್ಯೆಗಳಿಗೋಸ್ಕರ ಹೋರಾಡುತ್ತಿರುವ ರೈತ-ಕಾರ್ಮಿಕರ ಮೇಲೆ ಗುಂಡುಹಾರಿಸಲಾಗುತ್ತಿದೆ. ಸಮಾಜದ್ರೋಹಿಗಳು ಅಧಿಕಾರದಲ್ಲಿ ಮೆರೆಯುತ್ತಿದ್ದಾರೆ ಎಂದು ವಿಮರ್ಶನ ವ್ಯಕ್ತಪಡಿಸಿದ ಕಾಂ. ಇ. ಎಂ. ಎಸ್.ರು ಕರ್ನಾಟಕದಲ್ಲಿ ಖಾನ-ಗುಂಡೂರಾವ್-ಇಬ್ರಾಹಿಂರನ್ನು ಉದಹರಿಸಿದರು.

(ಮುಂದುವರಿಯುವುದು)

ಎಸ್. ಎಫ್. ಐ. ಸ್ಥಾಪನೆಯ ಹಿನ್ನೆಲೆ

[ಎಸ್. ಎಫ್. ಐ. ಸ್ಥಾಪನೆಗೆ ಕಾರಣವಾದ ಸಂದರ್ಭವು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನ (ಎ.ಐ.ಎಸ್.ಎಫ್.) ಒಳಗೇ ನಡೆಯುತ್ತಿದ್ದ ರಾಜಕೀಯ ಹಾಗೂ ಸೈದ್ಧಾಂತಿಕ ಅಂತರ್ಯುದ್ಧದೊಂದಿಗೆ ಗುರುತಿಸಲ್ಪಡುತ್ತದೆ. ಈ ಘರ್ಷಣೆಯ ಕುರಿತಾಗಿ ವಿಷದವಾಗಿ ಈ ಲೇಖನದಲ್ಲಿ ಚರ್ಚಿಸಲಾಗಿಲ್ಲ. ಆದರೆ ಎಸ್.ಎಫ್.ಐ.ನ ಸ್ಥಾಪನೆಗೆ ಕಾರಣವಾಗಿ ನಿಂತ ಪರಿಸ್ಥಿತಿಯನ್ನು ಕುರಿತು ಈ ಲೇಖನ ಬೆಳಕು ಚೆಲ್ಲುತ್ತದೆ.

ಡಿಸೆಂಬರ್ 25 ರಿಂದ 27ರವರೆಗೆ ಮುಂಬೈನಲ್ಲಿ ನಡೆಯಲಿರುವ ಎಸ್.ಎಫ್.ಐ.ನ 4ನೇ ಅಖಿಲಭಾರತ ಸಮ್ಮೇಳನದ ಪೂರಕವಾಗಿ ಕಾಂ. ಸಿ. ಭಾಸ್ಕರನ್‌ರ ಈ ಲೇಖನ ಪ್ರಕಟಿಸಲಾಗಿದೆ. ಉದಯಕುಮಾರ್ ಅನುವಾದಿಸಿದ್ದಾರೆ].

ಪ್ರತಿಯೊಂದು ರಾಷ್ಟ್ರದಲ್ಲೂ ವಿದ್ಯಾರ್ಥಿಗಳು ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ನಡೆಸಿದ್ದಾರೆ ಮತ್ತು ಇನ್ನೂ ಅನೇಕ ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಳು ಮುಂದುವರಿಯುತ್ತಲೇ ಇದೆ. ಭಾರತದಲ್ಲೂ ಸಹ ವಿದ್ಯಾರ್ಥಿಗಳು ರಾಷ್ಟ್ರನಾಯಕರ ಕರೆಗೆ ಪ್ರತಿಕ್ರಿಯೆ ತೋರಿಸಿದ್ದಾರೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ ಹೋರಾಟದ ಚರಿತ್ರೆಯಲ್ಲಿ ಹೊಸ ಅಧ್ಯಾಯಗಳನ್ನು ತಮ್ಮ ನೆತ್ತರಿನಿಂದಲೇ ಬರೆದಿದ್ದಾರೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ವಿದ್ಯಾರ್ಥಿಗಳು ಪ್ರಾರಂಭಿಕ ಘಟ್ಟದಲ್ಲಿ ತಮ್ಮನ್ನು ಪ್ರಾದೇಶಿಕ ಮಟ್ಟಗಳಲ್ಲಿ ಸಂಘಟನೆಗೊಳಪಡಿಸಿಕೊಂಡಿದ್ದರು.

ಹೀಗೆ ಪ್ರಾದೇಶಿಕವಾಗಿ ಹಂಚಿ ಹೋಗಿದ್ದ ವಿದ್ಯಾರ್ಥಿ ಸಂಘಟನೆಗಳನ್ನು ಸಮನ್ವಯಗೊಳಿಸುವ ಒಂದು ಕೇಂದ್ರ ಸಂಘಟನೆಯ ಅಗತ್ಯವನ್ನು ಮನಗಂಡ ರಾಷ್ಟ್ರ ನಾಯಕರ ಒಂದು ಪ್ರಯತ್ನದಿಂದಾಗಿ 1936ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ. ಐ. ಎಸ್. ಎಫ್.) ಜನ್ಮ ತಾಳಿತು. ಮುಹಮ್ಮದ್ ಆಲಿ ಜಿನ್ನಾ ಅವರ ಅಧ್ಯಕ್ಷತೆಯಲ್ಲಿ ಲಕ್ನೋದಲ್ಲಿ ನಡೆದ ಅಖಿಲ ಭಾರತ ಮಟ್ಟದ ವಿದ್ಯಾರ್ಥಿ ಸಮ್ಮೇಳನವನ್ನು ಜವಹರಲಾಲ್ ನೆಹರು ಅವರು ಉದ್ಘಾಟಿಸಿದ್ದರು.

ಇದರಿಂದಾಗಿ ದೇಶಾದ್ಯಂತ ವಿದ್ಯಾರ್ಥಿಗಳು ಉತ್ತೇಜಿತರಾಗಿ ತಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಎ. ಐ. ಎಸ್. ಎಫ್.ನ ನಾಯಕತ್ವದಡಿಯಲ್ಲಿ ಒಟ್ಟುಗೂಡಿದರು. ಅತಿ ಶೀಘ್ರದಲ್ಲೇ ಎ.ಐ.ಎಸ್. ಎಫ್. ಭಾರತದ ವಿದ್ಯಾರ್ಥಿ ಸಮುದಾಯದ ಆಶೋತ್ತರಗಳ ಸಂಕೇತವಾಗಿ ಪರಿಣಮಿಸಿತು. ಆದರೂ ಸಹ 1942ರಲ್ಲಿ ವಿದ್ಯಾರ್ಥಿಗಳ ಒಂದು ವಿಭಾಗ ಎ.ಐ.ಎಸ್.ಎಫ್.ನಿಂದ ದೂರ ಸರಿದು 'ಸ್ಟೂಡೆಂಟ್ ಕಾಂಗ್ರೆಸ್' ಎಂಬ ಪ್ರತ್ಯೇಕ ಸಂಘಟನೆಯೊಂದನ್ನು ರಚಿಸಿಕೊಂಡಿತು. ಆದರೆ ಇದು ಎ. ಐ. ಎಸ್. ಎಫ್. ಅನ್ನು ದೇಶದ ವಿದ್ಯಾರ್ಥಿ ಸಮುದಾಯದ ಮುಂಚೂಣಿಯಿಂದ ದೂರವಿರಿಸುವಲ್ಲಿ ಯಶಸ್ವಿಯಾಗಲಿಲ್ಲ. ಸಂಘಟನೆಯಲ್ಲಿ ಒಡಕುಂಟಾದ ನಂತರವೂ ಸಹ ಎ.ಐ. ಎಸ್.ಎಫ್. ವಿದ್ಯಾರ್ಥಿಗಳನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸಿತು. ಇತಿಹಾಸದ ಈ ಘಟನೆಯನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

1947, ಆಗಸ್ಟ್ 15ರಂದು ಬ್ರಿಟಿಷರಿಂದ ರಾಜಕೀಯ ಅಧಿಕಾರದ ವರ್ಗಾವಣೆಯಾದಾಗ ಜವಹರಲಾಲ್ ನೆಹರು ಸ್ವತಂತ್ರ ಭಾರತದ ಪ್ರಧಾನಿಯಾದರು. ಆದರೆ ಇಂಡಿಯಾದ ಜನತೆಗೆ ಸಂಬಂಧಿಸಿದಂತೆ ಹೇಳುವುದಾದರೆ ಅವರ ಕನಸುಗಳು ಭಗ್ನಗೊಂಡವು. ದೇಶ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ನಿರೀಕ್ಷೆಯನ್ನಿಟ್ಟುಕೊಂಡಿದ್ದರೋ ಆ ದಿಕ್ಕಿನತ್ತ ಸಾಗುತ್ತಿಲ್ಲವೆಂಬುದು ಸ್ಪಷ್ಟವಾಗತೊಡಗಿತು. ತಾವು ಹಿಂದಿನಂತೆಯೇ ಶೋಷಣೆಗೆ, ದಬ್ಬಾಳಿಕೆಗೆ ಒಳಗಾಗುತ್ತಿದ್ದೇವೆಂಬುದು ಅರಿವಾಗತೊಡಗಿತು. ತೀವ್ರತರವಾದ ಭೂಸುಧಾರಣೆಯನ್ನು ಕಾರ್ಯಗತಗೊಳಿಸುವ ಬಗ್ಗೆಯಾಗಲೀ ಅಥವಾ ಕೈಗಾರಿಕಾಭಿವೃದ್ಧಿಯ ಬಗೆಗಾಗಲಿ ಯಾವುದೇ ಸೂಚನೆ ಇರಲಿಲ್ಲ. ಹೊಸ ಆಡಳಿತಗಾರರು ವಸಾಹತುಶಾಹೀ ಶಿಕ್ಷಣ ಪದ್ಧತಿಯನ್ನು ಕಿತ್ತೆಸೆಯಲು ತಯಾರಿಲ್ಲದೇ ಇದ್ದದ್ದು ವಿದ್ಯಾರ್ಥಿಗಳು ಭ್ರಮನಿರಸನ ಹೊಂದುವಂತೆ ಮಾಡಿತು. ದೊಡ್ಡ ಬಂಡವಾಳಗಾರರು ಹಾಗೂ ಭೂಮಾಲೀಕರ ಅವಶ್ಯಕತೆಗನುಗುಣವಾಗಿ ಕೆಲವಾರು ಸಣ್ಣಪುಟ್ಟ ಬದಲಾವಣೆಗಳನ್ನು ಶಿಕ್ಷಣ ಪದ್ಧತಿಯಲ್ಲಿ ತರಲಿಚ್ಛಿಸಿದ್ದಾರೆಂಬುದು ಸ್ಪಷ್ಟವಾಯಿತು. ಹೆಚ್ಚುತ್ತಿದ್ದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದ ಬಳಿ ಯಾವುದೇ ಸ್ಪಷ್ಟ ಕಾರ್ಯಕ್ರಮಗಳಿರಲಿಲ್ಲ. ತಮ್ಮ ಆಸೆ ಆಕಾಂಕ್ಷೆಗಳು ದಿಕ್ಕಿಲ್ಲದೆ ತೂರಿ ಹೋದಾಗ ಜನತೆ ಅದರಲ್ಲೂ ಮುಖ್ಯವಾಗಿ ಕಾರ್ಮಿಕ ವರ್ಗ ಹೋರಾಟದ ಕಹಳೆಯನ್ನು ಮೊಳಗಿಸಿತು. ಎ. ಐ. ಎಸ್. ಎಫ್. ಸಹ ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಣೆಗಳ ಘೋಷಣೆಯೊಂದಿಗೆ ಹೋರಾಟದ ಕಣಕ್ಕೆ ಧುಮುಕಿತು.

ಎ. ಐ. ಎಸ್. ಎಫ್. ಕ್ರಿಯಾಶೀಲ ವಿದ್ಯಾರ್ಥಿಗಳ ಅದರಲ್ಲೂ ಮುಖ್ಯವಾಗಿ ಎಡ ಪಂಥೀಯ ಮನೋಭಾವದ ವಿದ್ಯಾರ್ಥಿ ವಿಭಾಗವೊಂದರ ಮುಂಚೂಣಿಯಾಗಿ ಬೆಳೆದುಬಂದಿತು. ಈ ಎಲ್ಲಾ ಕಾರಣಗಳಿಂದಾಗಿ ಅದು ಆಳುವ ವರ್ಗದ ವಿರೋಧಕ್ಕೆ ಹಾಗೂ ತೀವ್ರ ದಬ್ಬಾಳಿಕೆಗೆ ಒಳಗಾಗಬೇಕಾದ ಪರಿಸ್ಥಿತಿ ಒದಗಿತ್ತು. ಎ.ಐ. ಎಸ್ ಎಫ್.ನ ನಾಯಕತ್ವದಲ್ಲಿ ಸಂಘಟನಾ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಕ್ಕುಗಳು, ಶೈಕ್ಷಣಿಕ ಸುಧಾರಣೆ, ವಿದ್ಯಾರ್ಥಿ ಸಂಘದ ಹಕ್ಕುಗಳಿಗಾಗಿ ಮತ್ತು ಆಕ್ರಮ ಬಂಧನಗಳ ವಿರುದ್ಧವಾಗಿ ಅನೇಕ ಹೋರಾಟಗಳನ್ನು ನಡೆಸಲಾಯಿತು.

1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ಕಾಂಗ್ರೆಸ್ ಆಡಳಿತಗಾರರ ನಿರೀಕ್ಷೆಯನ್ನು ಸುಳ್ಳು ಮಾಡಿತು. 1948 ರಿಂದ 1951 ರವರೆಗೂ ಆಳುವ ವರ್ಗದ ಭೀಕರ ದಬ್ಬಾಳಿಕೆಗೆ ಒಳಗಾಗಿದ್ದ ಕಮ್ಯುನಿಸ್ಟ್ ಪಕ್ಷ ದೇಶದ ಅತ್ಯಂತ ದೊಡ್ಡ ವಿರೋಧ ಪಕ್ಷವಾಗಿ ರೂಪುಗೊಂಡಿತು. ಅಲ್ಲದೇ ಇತರ ಎಡ ಪಕ್ಷಗಳೂ ಸಹ ಕೆಲವು ಸ್ಥಾನಗಳನ್ನು ಪಡೆದುಕೊಂಡವು.

ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇಕಡ 50ರಷ್ಟನ್ನೂ ಸಹ ಕಾಂಗ್ರೆಸ್ ಪಕ್ಷ ಪಡೆಯಲು ಸಾಧ್ಯವಾಗಲಿಲ್ಲ. ಜನತೆ ಎಡ ಪಕ್ಷಗಳತ್ತ ವಾಲುತ್ತಿರುವುದರ ಸ್ಪಷ್ಟ ಸೂಚನೆಯನ್ನು ಈ ಚುನಾವಣೆ ನೀಡಿತು. ಇದರಿಂದಾಗಿ ಆಳುವವರ್ಗ ತನ್ನ ರಾಜಕೀಯ ತಂತ್ರವನ್ನು ಬದಲಾಯಿಸಬೇಕಾಯಿತು. ತಾವೂ ಸಹ ಎಡಪಂಥೀಯರೆಂಬ ಭಾವನೆಯನ್ನು ಜನರಲ್ಲಿ ಮೂಡಿಸಲು ಪ್ರಾರಂಭಿಸಿದರು. ಆವಡಿಯಲ್ಲಿ ನಡೆದ ಎ. ಐ. ಸಿ. ಸಿ. ಅಧಿವೇಶನದಲ್ಲಿ ಸಮಾಜವಾದವನ್ನು ತನ್ನ ರಾಜಕೀಯ ಗುರಿಯನ್ನಾಗಿ ಕಾಂಗ್ರೆಸ್ ಪಕ್ಷ ಘೋಷಿಸಿಕೊಂಡಿತು. ತಾನು ಸಮಾಜವಾದದತ್ತ ಸಾಗುತ್ತಿರುವ ಭ್ರಮೆಯನ್ನು ಜನರಲ್ಲಿ ಮೂಡಿಸುವುದಕ್ಕಾಗಿ ಕಾಂಗ್ರೆಸ್ ಸರ್ಕಾರ ತನ್ನ ಎರಡನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ಕೆಲವು ಸಮಾಜವಾದೀ ಅರ್ಥಶಾಸ್ತ್ರಜ್ಞರ ನೆರವನ್ನು ಪಡೆಯಿತು. ಇದರ ಜೊತೆಗೆ ಸಮಾಜವಾದೀ ಶಿಬಿರಕ್ಕೆ ಅನುಕೂಲಕರವಾದಂತಹ ವಿದೇಶಾಂಗ ನೀತಿಯನ್ನು ಸಹ ರೂಪಿಸಿಕೊಂಡಿತು. ಇವೆಲ್ಲವುಗಳ ಮೂಲಕ ಕಾಂಗ್ರೆಸ್ ಪಕ್ಷ ದೇಶವನ್ನು ಸಮಾಜವಾದದತ್ತ ಮುನ್ನಡೆಸುತ್ತಿದೆ ಎಂಬ ಸಾಮಾನ್ಯ ಭಾವನೆಯನ್ನು ಸೃಷ್ಟಿಸಿತು. ಎ. ಐ. ಎಸ್. ಎಫ್.ನ ನಾಯಕತ್ವ ಸಹ ಇಂತಹ ಗೊಂದಲಗಳ ಹಿಡಿತಕ್ಕೆ ಸಿಕ್ಕಿಬಿದ್ದಿತು. ಕಾಂಗ್ರೆಸ್ ಪಕ್ಷದ "ಪ್ರಗತಿಪರ ಸ್ವಭಾವ"ವನ್ನು ಕುರಿತು ಹೊಗಳಲಾರಂಭಿಸಿತು.

1962ರ ಭಾರತ-ಚೀನಾ ಗಡಿ ವಿವಾದದ ಜೊತೆಯಲ್ಲೇ ಅಂಧ ರಾಷ್ಟ್ರೀಯವಾದೀ ಶಕ್ತಿಗಳು ವಿದ್ಯಾರ್ಥಿ ಚಳುವಳಿಯಲ್ಲಿ ಕಾಣಿಸಿಕೊಂಡಿತು. ಹೀಗೆ ಸುಧಾರಣಾವಾದ ಹಾಗೂ ಅವಾಸ್ತವ ಸಿದ್ಧಾಂತಗಳು ಎ. ಐ. ಎಸ್. ಎಫ್. ನಾಯಕತ್ವವನ್ನು ಆವರಿಸಿಕೊಂಡು ಅದರ ಕ್ರಾಂತಿಕಾರೀ ಸ್ವಭಾವವನ್ನು ಅಳಿಸಿಹಾಕಿತು. ಅಂತಿಮವಾಗಿ ಎ.ಐ.ಎಸ್.ಎಫ್. ಒಂದು ನಿರ್ಜೀವ ಸಂಘಟನೆಯಾಗುವ ಸ್ಥಿತಿಯನ್ನು ತಲುಪಿತು.

ಸಂಘಟನೆಯ ಧೋರಣೆಗಳನ್ನು ವಿರೋಧಿಸುವ ಶಕ್ತಿಗಳು ಸಂಘಟನೆಯ ಒಳಗೇ ಬೆಳೆಯಲಾರಂಭಿಸಿತು. ಸುಧಾರಣಾವಾದ ಹಾಗೂ ಅಂಧ ರಾಷ್ಟ್ರೀಯವಾದದ ಹಿಡಿತದಿಂದ ಸಂಘಟನೆಯನ್ನು ಪಾರುಮಾಡುವ ಪ್ರಯತ್ನ ನಡೆಯಿತು. ಎಲ್ಲಾ ರಾಜ್ಯ ಘಟಕಗಳಲ್ಲೂ ಸಂಘಟನೆಯ ಸುಧಾರಣಾವಾದೀ ಕೇಂದ್ರ ನಾಯಕತ್ವದ ವಿರುದ್ಧ ಹೋರಾಟ ನಡೆಯಿತು. ಮೊದಲನೆಯದಾಗಿ ಹೋರಾಟವು ಆಂಧ್ರ ಪ್ರದೇಶದಲ್ಲಿ ಪ್ರಾರಂಭವಾಗಿ ಎಲ್ಲಾ ರಾಜ್ಯಗಳಿಗೂ ವ್ಯಾಪಿಸಿತು. ಉದಾಹರಣೆಗೆ ಎ. ಐ. ಎಸ್. ಎಫ್.ನ ಕೇರಳ ರಾಜ್ಯ ಘಟಕದ ಅನೇಕ ಮುಖಂಡರು ನಾಯಕತ್ವವನ್ನು ವಿರೋಧಿಸಿ ಕಣ್ಣಾನೂರಿನಲ್ಲಿ ನಡೆದ ಸಮ್ಮೇಳನದಿಂದ ಹೊರನಡೆದರು. ನಂತರ ಎರ್ನಾಕುಲಂನಲ್ಲಿ ನಡೆದ ಸಮ್ಮೇಳನದಲ್ಲಿ "ಸುಧಾರಣಾವಾದಿಗಳನ್ನು ಕಿತ್ತೆಸೆದು ಹೊಸ ನಾಯಕತ್ವವನ್ನು ಚುನಾಯಿಸಲಾಯಿತು.

ದೇಶಾದ್ಯಂತ ಮಹತ್ವದ ಬದಲಾವಣೆಗಳು ಉಂಟಾಗುತ್ತಿದ್ದ ಸಂದರ್ಭ. ಕಾಂಗ್ರೆಸ್ ಸರ್ಕಾರ ಆಗಲೇ ತನ್ನ 'ಪ್ರಗತಿಶೀಲ' ಸ್ವಭಾವವನ್ನು ಕಳೆದುಕೊಂಡಿತು ಆರ್ಥಿಕ ಬಿಕ್ಕಟ್ಟಿನ ತೀವ್ರತೆಯಿಂದಾಗಿ ಜನಸಾಮಾನ್ಯರ ಬದುಕು ದುಸ್ಸಾಧ್ಯವಾಗಿತ್ತು. ಸಾಮೂಹಿಕ ಹೋರಾಟಗಳು ಹೆಚ್ಚತೊಡಗಿದ್ದವು. ಶೈಕ್ಷಣಿಕ ಸುಧಾರಣೆ ಮತ್ತು ನಿರುದ್ಯೋಗ ಸಮಸ್ಯೆಗೆ ಸಂಬಂಧಿಸಿದಂತೆ ಸರ್ಕಾರದ ಧೋರಣೆಯಿಂದಾಗಿ ಅತೃಪ್ತಗೊಂಡ ವಿದ್ಯಾರ್ಥಿವರ್ಗ ಸಾಮೂಹಿಕ ಚಳುವಳಿಯ ಪ್ರವಾಹದೊಂದಿಗೆ ಸೇರಿಕೊಂಡಿತು. ಮತ್ತೊಂದು ಕಡೆ ಸರ್ಕಾರ ಜನತೆಯ ಹೋರಾಟಗಳಿಗೆ ಲಾಠಿ, ಬಂದೂಕುಗಳಿಂದ ಉತ್ತರಿಸತೊಡಗಿತು. ಈ ಹೋರಾಟಗಳಲ್ಲಿ ಅನೇಕ ವಿದ್ಯಾರ್ಥಿಗಳು ಹುತಾತ್ಮರಾದರು.

ಈ ಹೋರಾಟಗಳ ಸಂದರ್ಭದಲ್ಲಿ ಒಂದು ಸಮಸ್ಯೆ ಎದುರಾಯಿತು: ಈ ಹೋರಾಟಗಳಿಗೆಲ್ಲಾ ಒಂದು ಸಂಘಟನಾತ್ಮಕ ರೂಪವನ್ನು ಕೊಡುವ ಸಾಮರ್ಥ್ಯವುಳ್ಳ ಒಂದು ಕೇಂದ್ರ ಸಂಘಟನೆಯ ಕೊರತೆ ಎದುರಾಯಿತು. ಎ. ಐ. ಎಸ್. ಎಫ್.ನಿಂದ ಹೊರಬಂದ ವಿವಿಧ ರಾಜ್ಯಗಳ ಸಮಾನ ಮನೋಭಾವದ ಕಾರ್ಯಕರ್ತರು ಒಟ್ಟಿಗೆ ಸೇರುವ ಪ್ರಯತ್ನವನ್ನು ನಡೆಸಲಾಗಲಿಲ್ಲ. ಆದರೂ ಅಂತಹದೊಂದು ಸಂಘಟನೆಯ ಅಗತ್ಯವನ್ನು ಅವರು ಮನಗಂಡರು. ಇಂಥ ಒಂದು ಸಂದರ್ಭದಲ್ಲೇ ಪಶ್ಚಿಮ ಬಂಗಾಳದ ಅತ್ಯಂತ ಪ್ರಭಾವಶಾಲೀ ವಿದ್ಯಾರ್ಥಿ ಸಂಘಟನೆಯಾದ ಬಂಗಾಳ ಪ್ರಾಂತ ವಿದ್ಯಾರ್ಥಿ ಫೆಡರೇಷನ್ ಬಿ. ಪಿ. ಎಸ್. ಎಫ್. ತನ್ನ ಪ್ರಯತ್ನದ ಮೂಲಕ ಬೇರೆಬೇರೆ ರಾಜ್ಯಗಳ ಸಮಾನ ಅಭಿಪ್ರಾಯವುಳ್ಳ ವಿದ್ಯಾರ್ಥಿ ಸಂಘಟನೆಗಳ ನಾಯಕರ ಒಂದು ಸಭೆಯನ್ನು ಕರೆಯಿತು. 1970ರ ಜೂನ್ 1ರಿಂದ 7ರವರೆಗೆ ಪ. ಬಂಗಾಳದ "ಧಾರಿಯಾ"ದಲ್ಲಿ ಈ ಸಭೆ ನಡೆಯಿತು. ಸಭೆಯಲ್ಲಿ ವಿವಿಧ ರಾಜ್ಯಗಳಲ್ಲಿನ ಬೇರೆಬೇರೆ ವಿದ್ಯಾರ್ಥಿ ಸಂಘಟನೆಗಳ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿ ಒಕ್ಕೂಟಗಳ ಶಕ್ತಿ ಹಾಗೂ ಪ್ರಭಾವಗಳ ಬಗ್ಗೆ ಗಂಭೀರವಾಗಿ ಚರ್ಚಿಸಲಾಯಿತು. ವಿದ್ಯಾರ್ಥಿಗಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳ ಬಗ್ಗೆ ಬೇರೆ ಬೇರೆ ಸಂಘಟನೆಗಳ ದೃಷ್ಟಿಕೋನವನ್ನು ಕುರಿತು ಸಹ ಚರ್ಚೆ ನಡೆಸಲಾಯಿತು. ದೇಶಾದ್ಯಂತ ನಡೆಯುತ್ತಿದ್ದ ವಿದ್ಯಾರ್ಥಿ ಚಳುವಳಿಗಳನ್ನು ವಿಶ್ಲೇಷಣೆ ಮಾಡಿದ ಸಭೆ 'ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ' ಎಂಬ ಒಂದು ಹೊಸ ಅಖಿಲಭಾರತ ವಿದ್ಯಾರ್ಥಿ ಸಂಘಟನೆಯೊಂದನ್ನು ಸ್ಥಾಪಿಸಬೇಕೆಂಬ ತೀರ್ಮಾನವನ್ನು ಕೈಗೊಂಡಿತು. ಸಮ್ಮೇಳನವು 14 ಮಂದಿ ಸದಸ್ಯರನ್ನೊಳಗೊಂಡ ಒಂದು ಸಿದ್ಧತಾ ಸಮಿತಿಯನ್ನು ರಚಿಸಿ ಅವರ ಸಂಚಾಲಕರನ್ನಾಗಿ ಬಂಗಾಳ ಪ್ರದೇಶ ಸ್ಟೂಡೆಂಟ್ಸ್ ಫೆಡರೇಷನ್ (ಬಿ. ಪಿ. ಎಸ್. ಎಫ್.)ನ ಅಧ್ಯಕ್ಷರಾಗಿದ್ದ ಬಿಮನ್ ಬಸು ಅವರನ್ನು ಆಯ್ಕೆ ಮಾಡಿತು.

ಸಿದ್ಧತಾ ಸಮಿತಿಯು 1970ರ ಅಕ್ಟೋಬರ್ 2ರಿಂದ 4ರವರೆಗೆ ಪ. ಬಂಗಾಳದ "ಡಂಡಂ"ನಲ್ಲಿ ಸಭೆ ಸೇರಿ ರಚನೆಯ ನಂತರದ ತನ್ನ ಚಟುವಟಿಕೆಗಳನ್ನು ವಿಮರ್ಶಿಸಿತು. ಸಭೆಯು 1970ರ ಡಿಸೆಂಬರ್‌ನಲ್ಲಿ ಎಸ್. ಎಫ್. ಐ.ನ ಸ್ಥಾಪನಾ ಸಮ್ಮೇಳನವನ್ನು ಕೇರಳದಲ್ಲಿ ನಡೆಸುವ ಅತ್ಯಂತ ಮಹತ್ವದ ತೀರ್ಮಾನವನ್ನು ಕೈಗೊಂ

(7ನೇ ಪುಟ ನೋಡಿ)

ದಾರಿಕಾಣದ ಜನತಾಪಕ್ಷ

-ಎನ್ಕೆ

ಕಳ್ಳಸಂತೆಕೋರರ ಗೂಂಡಾಗಳ ಹಿಡಿತದಲ್ಲಿ ಸಾರ್ವಜನಿಕ ಜೀವನ ಸಿಕ್ಕಿಬಿದ್ದು ಬಡತನ ಹಾಗೂ ಅಸಮಾನತೆ ಹಲವು ಲಕ್ಷ ಕುಟುಂಬಗಳಲ್ಲಿ ಅಶಾಂತಿಗೆ ಎಡೆಕೊಟ್ಟಿದೆ. ಭ್ರಷ್ಟಾಚಾರ, ಗೋಲಿಬಾರ್, ಕಾರ್ಮಿಕ ಚಳುವಳಿ ದಮನ, ಆರ್ಥಿಕ ಮುಗ್ಗಟ್ಟು, ಕುಸಿದುಬಿದ್ದ ಕಾನೂನು ಎಲ್ಲವನ್ನೂ ಪ್ರಸ್ತಾಪಿಸಿದ ಕರ್ನಾಟಕದ ಜನತಾ ಪಕ್ಷದ ನಿರ್ಣಯ ಗಂಭೀರ ಕಾಳಜಿ ಇಲ್ಲದಿರುವ ಈ ಸರಕಾರದ ರಾಜೀನಾಮೆ ಕೇಳುವುದು ಅರ್ಥಹೀನವೆಂದೂ, ಅದನ್ನು ಕಿತ್ತುಹಾಕಲು ಜನ ಹೋರಾಟವನ್ನೇ ಪ್ರಾರಂಭ ಮಾಡಬೇಕಾಗಿದೆಯೆಂದೂ ಹೇಳಿ, ರಾಜಕೀಯ ನಿರ್ಣಯದಲ್ಲಿ ವ್ಯಕ್ತಿಪೂಜೆಗೇ ಪ್ರಾಧಾನ್ಯ ಸಿಗುತ್ತಿರುವ ಕಾಲದಲ್ಲಿ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆಯೆಂದೂ ಅನಿಸುತ್ತಿದೆಂದು ರಾಜಕೀಯ ನಿರ್ಣಯದಲ್ಲಿ ಕಣ್ಣೀರು ಸುರಿಸಲಾಗಿದೆ, ನಿರಾಶಭಾವನೆಯನ್ನು ವ್ಯಕ್ತಮಾಡಲಾಗಿದೆ. ರಾಜ್ಯ ಜನತಾ ಪಕ್ಷದ ಈ ನಿರ್ದಾಯದ ನಿರ್ಣಯ ಕತ್ತಲೆಕೋಣೆಯಲ್ಲಿ ದಾರಿಕಾಣದೆ ಅಳುತ್ತಿರುವ ಕೂಸಿನ ರೋಧನದಂತಿದೆಯಲ್ಲವೇ? ಕಣ್ಣಿದ್ದು ನೋಡುವ ಶಕ್ತಿ ಜನತಾಪಕ್ಷಕ್ಕಿಲ್ಲ. ಈ ದೇಶವ್ಯಾಪಿ ರಾಜಕೀಯ ಪಕ್ಷ ಇಂದಿರಾ ಗಾಂಧಿಯ ಏಕವ್ಯಕ್ತಿ ಪ್ರಭಾವದ ಕಗ್ಗತ್ತಲೆಯಲ್ಲಿ ದಾರಿಕಾಣದೆ, ಕತ್ತಲೆ ಕೋಣೆಯಲ್ಲಿರುವ ಕೂಸಿನಂತೆ ಬೆಳಕು ಕಾಣಲು ತಡಪಡಿಸುತ್ತಿದೆ. ವಿರೋಧಿ ಪಕ್ಷಗಳ ವಿಲೀನವಿಲ್ಲ, ಹೋರಾಟವೊಂದೇ ದಾರಿ ಎಂದೇ ಕೂಗುತ್ತಾ ಕುಳಿತಿದೆ. ಈಗಾಗಲೇ ಇಂದಿರಾ ಸರ್ವಾಧಿಕಾರವನ್ನು, ಆಕೆಯ ವ್ಯಕ್ತಿ ಪೂಜೆಯನ್ನು ಚಂಡಿಕಾ ಹೋಮ ಮಾಡಿ ಭಸ್ಮಮಾಡಿದ ಏಕೈಕ ಪಾರ್ಟಿ ದೇಶವಲ್ಲಿದೆಂಬುದನ್ನು ತಿಳಿದುಕೊಳ್ಳುವ ಶಕ್ತಿ ಜನತಾ ಪಾರ್ಟಿಗಿಲ್ಲ. ಅದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಒಂದು ನಿಶ್ಚಿತ ಕಾರ್ಯಕ್ರಮವನ್ನು ಒಪ್ಪಿಕೊಳ್ಳುವ, ಅದನ್ನು ಕಾರ್ಯರೂಪದಲ್ಲಿ ತರುವ ಎಡ ಮತ್ತು ಪ್ರಜಾಪ್ರಭುತ್ವರಂಗ ರಚಿಸಿ ಜನತೆಯ ಹೋರಾಟದ ಮೂಲಕ ಅದನ್ನು ಭದ್ರಪಡಿಸಿ, ಇಂದಿರಾ ಗಾಂಧಿಯ ಪ್ರತಿಭೆಯ ವಿರುದ್ಧ ಹೋರಾಡಿ ಕಗ್ಗತ್ತಲೆಯ ರಾಜಕೀಯಕ್ಕೆ ನಂದಾದೀಪ ತೋರಿಸಿದೆ. ಪ. ಬಂಗಾಲ, ತ್ರಿಪುರಾ, ಕೇರಳಗಳಲ್ಲಿ ಅದನ್ನು ಸಾಧಿಸಿದೆ. ದೇಶದ ಮಟ್ಟದಲ್ಲಿ ಕೂಡ ಕಾಂಗ್ರೆಸ್ ಮುಖಂಡತ್ವದ ಕಾರ್ಮಿಕ ಸಂಘಟನೆಯನ್ನು ಬಿಟ್ಟು ಇತರ ಎಲ್ಲ ಕಾರ್ಮಿಕರನ್ನು ಸೇರಿಸಿ, ಹಾಗೆಯೇ ವಿರೋಧಿ ಪಕ್ಷಗಳನ್ನೆಲ್ಲ ಸೇರಿಸಿ, ಕಾರ್ಮಿಕರ ಚರಿತ್ರಾರ್ಹ ಪ್ರದರ್ಶನ, ರೈತರ ಬೃಹತ್ ಪ್ರದರ್ಶನವನ್ನು ದಿಲ್ಲಿಯಲ್ಲಿ ಮಾಡಿತೋರಿಸಿ ಜನಶಕ್ತಿಯನ್ನು ಪ್ರದರ್ಶಿಸಿದೆ. ಇದರ ಬೆನ್ನೆಲುಬು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ನೇತೃತ್ವದ ಕಾರ್ಮಿಕರಂಗ ಮತ್ತು ರೈತಸಂಘ ಎಂಬುದನ್ನು ಮರೆಯುವಂತಿಲ್ಲ ಹಾಗೆಯೇ ಯುವಕರ-ವಿದ್ಯಾರ್ಥಿಗಳ ಪರಿಣಾಮಕಾರಿ ಪ್ರದರ್ಶನವು ದಿಲ್ಲಿಯಲ್ಲಿ ನಡೆಯಿತು.

ಹಿರಿಯ ರಾಜಕಾರಣಿಗಳಾದ ನಿಜಲಿಂಗಪ್ಪ, ರಾಮಕೃಷ್ಣ ಹೆಗ್ಗಡೆಯಂಥವರು ಕಾರ್ಯಕಾರಿ ಸಭೆಯಲ್ಲಿ ಹಾಜರಿದ್ದರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ತೋರಿಸಿದ ಈ ದಾರಿ ಅವರ ಕಣ್ಣಿಗೆ ಕಾಣಿಸದಿದ್ದರೆ, ಪ. ಬಂಗಾಲ ತ್ರಿಪುರ, ಕೇರಳಗಳಲ್ಲಿ ಅವರು ಸಾಧಿಸಿದ ಸಾಧನೆ ಇವರಿಗೆ ಅರ್ಥವಾಗುವುದಿಲ್ಲವೆಂದರೆ ಇವರು ನಿಜವಾಗಿಯೂ ಇಂದಿರನ ಏಕವ್ಯಕ್ತಿ ಸರ್ವಾಧಿಕಾರವನ್ನು ಸೋಲಿಸಲು ಹಿಂದೇಟು ಹಾಕುತ್ತಿದ್ದಾರೆ. ಅಷ್ಟೇ ಅಲ್ಲ, ಅಂಥ ಸಂದರ್ಭ ಬಂದರೆ ಇಂದಿರನ ಸೆರಗು ಹಿಡಿದು ಕತ್ತಲೆಯಿಂದ ಹೊರಗೆಬರಲು ಹಿಂದೇಟು ಹಾಕಲಿಕ್ಕೂ ಅಂಜಲಿಕ್ಕಿಲ್ಲೆಂದು ಭಾವಿಸಲೇ? ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ತೋರಿಸಿದ ಎಡ ಮತ್ತು ಪ್ರಜಾಪ್ರಭುತ್ವರಂಗವೇ ಇಂದಿರಾಗಾಂಧಿಯ ವ್ಯಕ್ತಿಪೂಜೆ, ದೈವಿಶಕ್ತಿಯನ್ನಳಿಸಲಿರುವ ಮಹಾ ಈಶ್ವರೀಶಕ್ತಿಯೆಂಬುದನ್ನು ಜನತಾ ಪಾರ್ಟಿ ಮುಖಂಡರು ತಿಳಿಯುವುದಗತ್ಯ.

ಕರ್ನಾಟಕ ರಾಜ್ಯದಲ್ಲಿ

ದೇವರಾಜ ಅರಸರ ಮಧ್ಯಸ್ಥಿಕೆ

“ದಾರಿಕಾಣದಾಗಿದೆ ರಾಘವೇಂದ್ರನೇ” ಎಂದು ಜನತಾ ಪಕ್ಷದ ಅಧ್ಯಕ್ಷ ಬೊಮ್ಮಾಯಿಯವರು ಹಾಡುತ್ತಿರುವಾಗ, ದೇವರಾಜ ಅರಸರು ಇಂದಿರಾಗಾಂಧಿಯ ಸರ್ವಾಧಿಕಾರಿ ಶಕ್ತಿಯನ್ನೆದುರಿಸಲು ತಮ್ಮದೇ ಆದ ದಾರಿ ತೋರಿಸ ಹೊರಟಿದ್ದಾರೆ. ರಾಷ್ಟ್ರಕ್ಕೆ ರಾಜಕೀಯವಾಗಿ ಬದಲಿ ವ್ಯವಸ್ಥೆ ಕಲ್ಪಿಸಲು ಏಕ ಮನೋಭಾವವುಳ್ಳ ವಿರೋಧಿ ಪಕ್ಷಗಳೆಲ್ಲ ಒಗ್ಗೂಡಬೇಕೆಂದು ಅರಸರ ಆಶಯ. ಎರಡು ಕಮ್ಯುನಿಸ್ಟ್ ಪಾರ್ಟಿಗಳು ಮತ್ತು ಭಾರತೀಯ ಜನತಾಪಾರ್ಟಿ ತಮ್ಮದೇ ಅಸ್ತಿತ್ವ ಹೊಂದಿಕೊಂಡಿವೆ. ಜನತಾ, ಲೋಕದಳ, ಬಹುಗುಣ ಅವರ ಪಾರ್ಟಿ, ಶರದಪವಾರ ಕಾಂಗ್ರೆಸ್ ಗಳೆಲ್ಲ ಒಂದಾದದ್ದಾದರೆ ಕಾಂಗ್ರೆಸ್ ವಿರುದ್ಧ ಪರ್ಯಾಯ ಪಾರ್ಟಿಯಾಗಬಹುದೆಂಬುದು ಅವರ ಅಭಿಪ್ರಾಯ. ಜನತಾ ಪಾರ್ಟಿಯಲ್ಲಿ ಒಗ್ಗೂಡಿದ್ದ ಪಾರ್ಟಿಯೊಳಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದುದರಿಂದಲೇ ಹಾಗೆಯೇ ಆರ್. ಎಸ್. ಎಸ್.ನ ಪಾತ್ರದ-ಸಂಬಂಧದ ಕುರಿತು ತಿಕ್ಕಾಟದಿಂದಾಗಿ 1979 ಕೊನೆಗೆ ಜನತಾ ಪಾರ್ಟಿ ಸರಕಾರ ಉರುಳಿಬಿದ್ದು, ಪಕ್ಷ ಭಿನ್ನ ವಿಭಿನ್ನವಾದುದನ್ನರಿತವರೆಲ್ಲ, ವಿರೋಧಿ ಪಕ್ಷಗಳ ವಿಲೀನೀಕರಣ ಸಮಂಜಸವಲ್ಲೆಂದು ಹೇಳುತ್ತಿದ್ದಾರೆ. ಭಾರತೀಯ ಜನತಾ ಪಾರ್ಟಿ ಅಂಥ ಸ್ಪಷ್ಟ ಅಭಿಪ್ರಾಯ ಹೊಂದಿದೆ. ಜನತಾಪಾರ್ಟಿಯ ಕರ್ನಾಟಕದಂಥ ಘಟಕಗಳೂ ಪಕ್ಷದ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವ ನಿಲುವನ್ನೇ ಹೊಂದಿವೆ. ಆದರೆ ಬೇರೆಯವರೆಲ್ಲ ಹೇಗಾದರೂ ಮಾಡಿ ವಿರೋಧಿ ಪಕ್ಷಗಳೆಲ್ಲ ವಿಲೀನಗೊಳಿಸಬೇಕೆಂಬ ತರಾತುರಿಯಲ್ಲಿದ್ದಾರೆ.

ಮೊನ್ನೆ ತಾನೇ ಪ್ರಕಟವಾದ 16 ವಿಧಾನಸಭೆಗಳ ಪರಿಣಾಮದಿಂದ ದೇವರಾಜ ಅರಸರು ಸ್ಫೂರ್ತಿ ಪಡೆದಿದ್ದಾರೆ. ಈ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಭಾವ ಕುಗ್ಗಿರುವುದೂ, ಅದಕ್ಕೆ ಕಡಿಮೆ ಮತ ಬಿದ್ದಿರುವುದೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಭಾರತೀಯ ಜನತಾಪಾರ್ಟಿ ಹಾಗೂ ಮೂವರು ಸ್ವತಂತ್ರರು ಹೆಚ್ಚು ಮತ ಪಡೆದು ಗೆದ್ದಿರುವುದೂ ಹಾಗೆಯೇ ಹೆಚ್ಚಿನ ಮತಕ್ಷೇತ್ರಗಳಲ್ಲಿ ಎಲ್ಲ ವಿರೋಧಿ ಪಕ್ಷಗಳು ಸೇರಿ ಕಾಂಗ್ರೆಸ್ ವಿರುದ್ಧ ಒಬ್ಬ ಉಮೇದ್ವಾರನನ್ನೇ ನಿಲ್ಲಿಸುವಲ್ಲಿ ಯಶಸ್ವಿಯಾಗಿರುವುದೂ ಬದಲಾವಣೆಯ ಕುರುಹುಗಳನ್ನು ತೋರ್ಪಡಿಸುತ್ತದೆ. ಈ ಬದಲಾವಣೆಗೆ ವಿರೋಧಿ ಪಕ್ಷದವರೆಲ್ಲ ಸೇರಿ ರೈತ-ಕಾರ್ಮಿಕರ, ಜನತೆಯ ಸಂಯುಕ್ತ ಹೋರಾಟ ನಡೆಸುತ್ತಿರುವುದೇ ಮುಖ್ಯ ಕಾರಣವೆಂಬುದನ್ನು ಎರಡು ಕಮ್ಯುನಿಸ್ಟ್ ಪಾರ್ಟಿಗಳು ಬಿಟ್ಟು ಬೇರೆಯವರಿಗೆ ಅರಿವಾಗುತ್ತಿಲ್ಲ. ಆಳವಾದ, ಮೂಲಭೂತ ಭಿನ್ನಾಭಿಪ್ರಾಯಗಳಿರುವ ಪಾರ್ಟಿಗಳ ವಿಲೀನೀಕರಣ ಕಾಯಂ ಉಳಿಯಲಾರದು. ಜನತೆಯ ಸಮಸ್ಯೆಗಳ ಪರಿಹಾರಕ್ಕೆ ವಿರೋಧಿ ಪಕ್ಷಗಳೆಲ್ಲ ಹೊಂದಾಣಿಕೆ ಮಾಡಿಕೊಂಡು ಹೋರಾಟಗಳನ್ನು ನಡೆಸುತ್ತಿರುವಂತೆಯೇ, ತಂತಮ್ಮೊಳಗೆ ಹೆಚ್ಚಿನ ತಿಳುವಳಿಕೆ ಉಂಟಾಗಿ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡದ್ದಾದರೆ (ಇದಕ್ಕೆ ಬಿ. ಜೆ. ಪಿ. ಕೂಡ ತಯಾರಿದ್ದಂತೆ ಕಂಡುಬರುತ್ತದೆ) ಕಾಂಗ್ರೆಸ್ಸನ್ನು ಸೋಲಿಸುವುದು ಸುಲಭವಾದೀತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುವು ಇದು. ದೇವರಾಜ ಅರಸ್ ಅವರು ಅನುಭವದಿಂದ ಪಾಠ ಕಲಿತು ಸಮರ್ಪಕವಾದ ದಾರಿತೋರಿಸುವುದಗತ್ಯ. ಇಲ್ಲವಾದರೆ 1979ರಂತೆ, ಅಧಿಕಾರಲಾಲಸೆ, ವ್ಯಕ್ತಿ ಪೂಜೆಗಳೆಲ್ಲ ಅವರ ಪ್ರಯತ್ನಕ್ಕೆ ನೀರೆರಚಿ, ಜನತೆ ಮತ್ತೊಮ್ಮೆ ಛೀಮಾರಿ ಹಾಕಲಿಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಒಂದು ಸಲ ಎಡವಿದರೆ ಚಿಂತೆಯಿಲ್ಲ. ಹಗಲಲ್ಲೇ ಎಡವಬಾರದು.

ನುಂಗಿದರಪ್ಪಾ ನುಂಗಿದರು ೫೦ ಲಕ್ಷ ನುಂಗಿದರು

ಮಹಾರಾಷ್ಟ್ರದ ಮುಖ್ಯಮಂತ್ರಿ ಅಬ್ದುಲ್ ರಹಮಾನ್ ಅಂತುಲೆ ಕೋಟಿ ಗಟ್ಟಲೇ ಹಣ ನುಂಗಿದಾಗ ಹಾಗೆಯೇ ಕೇಂದ್ರ-ರಾಜ್ಯ ಮಂತ್ರಿಗಳೂ ಅವರ ಏಜಂಟರೂ ದಿನನಿತ್ಯ ನುಂಗುವುದರಲ್ಲೇ ಇರುವಾಗ, ಕಾಂಗ್ರೆಸ್ ಕಾರ್ಯದರ್ಶಿ ಇಬ್ರಾಹಿಂನಿಗೆ ಕೊಡಗಿನ ಕಾಡಿನ ಮರಗಳನ್ನೆಲ್ಲ ನುಂಗಲು ಬಿಟ್ಟಿರುವಾಗ, 10-50-100 ರೂಪಾಯಿಗಳನ್ನು ಪಟ್ಟಣ-ಹಳ್ಳಿಗಳ ಕಾಂಗ್ರೆಸಿಗರು ತಿಂದರೇನಂತೆ ಮಹಾ.

ಕರ್ನಾಟಕ ಕಾಂಗ್ರೆಸ್ಸಲ್ಲಿ ಶಿಸ್ತು ತರಲು ಪ್ರಯತ್ನಿಸುತ್ತಿರುವ ಕೆ. ಪಿ. ಸಿ. ಸಿ. ಅಧ್ಯಕ್ಷ ರಾಠೋಡರವರು ರಣಕಹಳೆ ಊದಿದ್ದಾರೆ-ಕಾಂಗ್ರೆಸ್ ಸದಸ್ಯತ್ವದ ಹಣ ಬಾಕಿ ರೂ. 50ಲಕ್ಷ ಕೂಡಲೇ ಮರುಪಾವತಿಯಾಗಲಿ; ಬಡ್ಡಿ ಇಲ್ಲದೇ ರಕಮು ವಸೂಲಿ ಮಾಡಲು ತಾರಾಬಾಯಿ ನೇತೃತ್ವದಲ್ಲಿ ಸೈನ್ಯ ಬರುತ್ತದೆ. ಎಂ. ಪಿ., ಎಂ ಎಲ್.ಎ., ಮಂತ್ರಿ, ಕೆ.ಪಿ.ಸಿ.ಸಿ. ಸದಸ್ಯರು, ಜಿಲ್ಲಾ ಮಟ್ಟದ ಧುರೀಣರೇ ಎಚ್ಚರಿಕೆ! 1980ರಲ್ಲೇ ಸದಸ್ಯರನ್ನು ನೋಂದಾಯಿಸುವ ಪುಸ್ತಕ ಕೊಡಲಾಗಿತ್ತು. 1981 ಮಾರ್ಚ್ ಕೊನೆಯೊಳಗಾಗಿ ಪುಸ್ತಕಗಳು ಹಣದೊಂದಿಗೆ ಮರುಪಾವತಿಯಾಗಬೇಕಾಗಿತ್ತು. ಬಂಗಾರಪ್ಪನವರ ರಾಜೀನಾಮೆಯಿಂದ ಅಧ್ಯಕ್ಷ ಕುರ್ಚಿ ಖಾಲಿಯಾಗಿತ್ತು. ಕುರ್ಚಿ ಖಾಲಿಯಿದ್ದಾಗ ಹಣ ಪಾವತಿ ಯಾಕೆ? ಎಲ್ಲರಿಗೂ ತಿಳಿಯುವ ಮಾತಿದೆ. ಈಗ ರಾಠೋಡ ಬಂದಿದ್ದಾರೆ. ಇವರೂ ಎಲ್ಲದರಲ್ಲೂ ಪರಿಣತರೆ. ಹಾಗಿರುವಾಗ ಹಣ ಎಲ್ಲಿದ್ದರೂ ಹೆಣವಾಗುವುದಿಲ್ಲ. ಚಾಲ್ತಿಯೊಳಗಿರುತ್ತದೆ. ಮಂತ್ರಿಗಳಿಂದ ಹಿಡಿದು ಮರಿಗಳವರೆಗೂ ಎಲ್ಲರ ಹಣವೂ ಚಾಲ್ತಿಯೊಳಗಿತ್ತು. ಈಗ ತಾರಾಬಾಯಿ ಕೈಚೀಲ ಹಿಡಿದು ಹೊರಟಿದ್ದಾರೆ. ಸದಸ್ಯತ್ವ ಶುಲ್ಕವನ್ನು ಜನರಿಂದಂತೂ ಕೂಡಿಸುವ ರೂಢಿಯಿಲ್ಲವಲ್ಲ. ಮಂತ್ರ್ಯೊಬ್ಬರ ಕಿಸೆಯಿಂದ ನಮ್ಮ ಕೈಗೆ ಸೇರಿದ್ದನ್ನೇ ಕೊಡುವವರು. ತಾರಾಬಾಯಿ ಬರಲಿ ನಾವು ಕೊಟ್ಟೇ ಕೊಡುತ್ತೇವೆ. ಆದರೆ ರಾಠೋಡರು ಇಷ್ಟು ಗುಲ್ಲೇಕೆ ಎಬ್ಬಿಸಿದ್ದಾರೆ. ಪಾರ್ಟಿಯ ಗುಟ್ಟನ್ನು ಬಯಲುಮಾಡಿ, ಮರ್ಯಾದೆ ಇದ್ದವರಿಗೆಲ್ಲ ಜನ ಛೀಮಾರಿಹಾಕುವಂತೆ ಮಾಡಿದ್ದಾರಲ್ಲ. ರಾಠೋಡರವರ ಮೇಲೆ ಶಿಸ್ತುಭಂಗ ಕ್ರಮ ತೆಗೆದುಕೊಳ್ಳಬೇಕು. ಕೆ.ಪಿ.ಸಿ.ಸಿ. ಅಧ್ಯಕ್ಷ ಸ್ಥಾನದಿಂದ ಅವರನ್ನು ಕೆಳಗಿಳಿಸಬೇಕು. 6 ವರ್ಷ ಅವರು ಯಾವ ಸ್ಥಾನದಲ್ಲೂ ಇರದಂತೆ ಮನಾಯಿ ಮಾಡಬೇಕು. ಇದು ದುಡ್ಡು ತಿಂದ ಕಾಂಗ್ರೆಸಿಗರ ಬೇಡಿಕೆ. ದಿಲ್ಲಿಯಿಂದ ದೇವವಾಣಿ ಬಂತಂತೆ-ಅಸ್ತು-ಅಸ್ತು.

ಹೆಲಿಕಾಪ್ಟರ್-ವಿಮಾನ-ಸ್ಪುಟ್ನಿಕ್

ಇನ್ನು ಚಿಂತೆಗೆ ಕಾರಣವೇ ಇಲ್ಲ. “ಸರ್ವೇಜನಾ ಸುಖಿನೋಭವಂತು” ಪ್ರತಿಯೊಂದು ಹಳ್ಳಿಗೂ ನೀರು, ಮಕ್ಕಳಿಗೆ ಕಲಿಯಲು ಶಾಲೆ, ಇರಲು ಮನೆ, ದುಡಿಯಲು ಉದ್ಯೋಗ, ಜಡ್ಡಾದರೆ ಔಷಧಿ ಒದಗಿಸಲು ದವಾಖಾನೆ. ಕರ್ನಾಟಕ ರಾಜ್ಯದಲ್ಲಿ ಸ್ವರ್ಗಸುಖವೇ ಸುಖ.

ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ಹೆಲಿಕಾಪ್ಟರ್ ಖರೀದಿ ಮಾಡಿದ್ದರು. ಗುಂಡೂರಾಯರು ಜನ ಸಂಪರ್ಕ ಬೆಳೆಸಲು ಅದರ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹೆಲಿಕಾಪ್ಟರಿನಲ್ಲಿ ಸಂಚರಿಸಲು ತಾಸಿಗೆ ಹತ್ತು ಸಾವಿರ ರೂ. ಖರ್ಚಾದರೂ ಚಿಂತೆಯಿಲ್ಲ. ಜನರ ಸೇವೆಗಾಗಿ ಆ ಖರ್ಚಲ್ಲವೇ? ಈಗ ಗುಂಡೂರಾಯರು ತಾನೊಬ್ಬನೇ ಹೆಲಿಕಾಪ್ಟರಿನಲ್ಲಿ ತಿರುಗಾಡಿದರೆ ಅಪಾರ ಅನ್ಯಾಯ ಮಾಡಿದಂತಾಗುತ್ತದೆಂದು ಹೇಳಿ ಸಚಿವರು ಮತ್ತು ಸರಕಾರಿ ಅಧಿಕಾರಿಗಳ ಉಪಯೋಗಕ್ಕಾಗಿ ನಾಲ್ಕು ಆಸನಗಳ ಒಂದು ವಿಮಾನವನ್ನೇ ಖರೀದಿ ಮಾಡಿದ್ದಾರೆ. ಇದಕ್ಕೆ ಹೇಳುವುದು ಗಂಡೆದೆಯ ಗುಂಡೂರಾವ್ ಸರಕಾರವೆಂದಲ್ಲವೇ. ಹಲವಾರು ಮಂತ್ರಿಗಳಿಗೆ, ಅಧಿಕಾರಿಗಳಿಗೆ ಸಂಚರಿಸಲು ಒಂದೇ ವಿಮಾನ ಸಾಕಾಗುವುದಿಲ್ಲ. ಇನ್ನೂ ಕೆಲ ವಿಮಾನಗಳ ಖರೀದಿಗಾಗಿ ಕೇಂದ್ರದ ಅನುಮತಿ ಕೋರಲಾಗಿದೆಯಂತೆ. ಅಮ್ಮಾವ್ರ ಆಶೀರ್ವಾದ ಸಿಕ್ಕೇ ತೀರುತ್ತದೆ. ಮತ್ತೆ ನೋಡಿ ಆಕಾಶದೆಡೆಗೆ-ಎಲ್ಲೆಲ್ಲೂ ಹೆಲಿಕಾಪ್ಟರುಗಳು, ವಿಮಾನಗಳೂ ಹಾರುವುದನ್ನು. ಭೂಮಿಯಲ್ಲಿ ಓಡಾಡಿದರೆ ಜನರ ಸಂಕಷ್ಟಗಳ ಪರಿಹಾರ ಸಮಸ್ಯೆ ಎದುರಿಸಬೇಕಾಗುತ್ತದೆ. ಆಕಾಶದಲ್ಲಿ ಹಾರಾಡಿದರೆ ‘ಟಾಟಾ’ ಎಂದು ಹೇಳಿ ಮುಗಿಸಬಹುದಲ್ಲ. ಬುದ್ಧಿವಂತ ಮಂತ್ರಿಮಂಡಲ. ಚುನಾವಣೆಯ ಮುಂಚೆ ಹೆಚ್ಚಿನ ಜನ ಸಂಪರ್ಕ ತೀವ್ರ ಬೆಳೆಸುವ ಸಲುವಾಗಿ ಸ್ಪುಟ್ನಿಕ್ ಖರೀದಿಯಾದರೆ ಆಶ್ಚರ್ಯಪಡಬೇಕಾಗಿಲ್ಲ. ನಮ್ಮದು ಮಾದರಿ ರಾಜ್ಯ. ಊರಿಂದ ಊರಿಗೆ ಸ್ಪುಟ್ನಿಕ್ ಮೂಲಕ ಪ್ರಯಾಣ. ಇದೇ ನಮ್ಮ ರಾಯರ ಬಯಕೆ.

ಸಮ್ಮೇಳನವು ಕೈಕೊಂಡ ನಿರ್ಣಯಗಳು

ಡಿಸೆಂಬರ್ 11ರಿಂದ 14ರವರೆಗೆ ಮಂಗಳೂರಿನಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನವು ಈ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ನಿರ್ಣಯಗಳ ಪೂರ್ತಿ ಪಾಠವನ್ನು ಇಲ್ಲಿ ಕೊಡಲಾಗಿದೆ.

ಜನವರಿ ೧೯ರ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳುವಳಿ ಸಮಿತಿಯ ನೇತೃತ್ವದಲ್ಲಿ ನ. 23ರಂದು ನವದೆಹಲಿಯಲ್ಲಿ ಸಂಸತ್ ಭವನದೆದುರು ನಡೆದ ರ್‍ಯಾಲಿಯನ್ನು ಮತ್ತು ಜನವರಿ 19, 1982ರಂದು ಒಂದು ದಿನ ಅಖಿಲಭಾರತ ಸಾರ್ವತ್ರಿಕ ಮುಷ್ಕರ ನಡೆಸಲು ತೀರ್ಮಾನಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯಸಮ್ಮೇಳನವು ಶ್ಲಾಘಿಸುತ್ತದೆ.

ಕಾರ್ಮಿಕವರ್ಗದ ಮತ್ತು ದುಡಿಯುವ ಜನತೆಯ ಹಿತರಕ್ಷಣೆಮಾಡಲು ಅಗತ್ಯವಾಗಿರುವ, ದೇಶದಲ್ಲಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ನಡೆಸುವ ಹೋರಾಟದಲ್ಲಿ ಕಾರ್ಮಿಕವರ್ಗವು ತನ್ನ ಚಾರಿತ್ರಿಕ ಪಾತ್ರವನ್ನು ನಿರ್ವಹಿಸಲು ತೀರಾ ಅಗತ್ಯವಾಗಿರುವ ವಿಶಾಲ ತಳಹದಿಯ ಟ್ರೇಡ್‌ಯೂನಿಯನ್ ಐಕ್ಯತೆಯನ್ನು ಸಾಧಿಸುವಲ್ಲಿ ಅತಿ ಯಶಸ್ವಿಯಾದ ಪಾರ್ಲಿಮೆಂಟ್ ಚಲೋ ಮತ್ತು ಒಂದು ದಿವಸದ ಅಖಿಲಭಾರತ ಮುಷ್ಕರಕ್ಕೆ ಕರೆ, ಗಮನಾರ್ಹ ಮುನ್ನಡೆ ಸಾಧಿಸಲು ಸಹಾಯಕವಾಗಿವೆ.

ರಾಷ್ಟ್ರೀಯ ಭದ್ರತಾ ಶಾಸನ ಮತ್ತು ಅಗತ್ಯಸೇವಾ ನಿರ್ವಹಣಾ ಶಾಸನಗಳಲ್ಲಿರುವ, ಟ್ರೇಡ್‌ಯೂನಿಯನ್ ಚಳುವಳಿಯನ್ನು ದಮನ ಮಾಡುವ ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ತುಟ್ಟಿಭತ್ತೆ ಮತ್ತು ಬೋನಸ್‌ಗಳನ್ನು ತಡೆಹಿಡಿಯುವ ಉದ್ದೇಶ ಹೊಂದಿರುವ ವೇತನ ಮತ್ತು ಆದಾಯದ ನೀತಿ-ಇವೆಲ್ಲ ಕ್ರಮಗಳಲ್ಲಿರುವ ಕಾಂಗ್ರೆಸ್ (ಐ) ಸರ್ಕಾರದ ವಿರೋಧಿ ಧೋರಣೆಗಳನ್ನು ಕಾರ್ಮಿಕ ಸಂಘಗಳು ಒಗ್ಗಟ್ಟಾಗಿ ಪ್ರತಿರೋಧಿಸುತ್ತಿವೆ.

ದೇಶದ ಅರ್ಥ ವ್ಯವಸ್ಥೆಯನ್ನು ಇಂಟರ್ ನ್ಯಾಷನಲ್ ಮೊನಿಟರಿ ಫಂಡಿಗೆ ಒತ್ತೆಯಿಡುವುದರ ವಿರುದ್ಧ, ಎಲ್ಲಾ ಜನವಿಭಾಗಗಳನ್ನು ಸಂಕಟದಲ್ಲಿ ಸಿಲುಕಿಸುವ ಹಣದುಬ್ಬರ ಮತ್ತು ಏರಿದ ಬೆಲೆಗಳ ವಿರುದ್ಧ ಕಾರ್ಮಿಕರು ಮತ್ತು ನೌಕರರು ಒಗ್ಗಟ್ಟಾಗಿ ಚಳುವಳಿಗಿಳಿದಿದ್ದಾರೆ, ಪರಿಣಾಮಕಾರಿಯಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಮತ್ತು ಇತರ ಅಗತ್ಯವಸ್ತುಗಳನ್ನು ಕಡಿಮೆ ಬೆಲೆಗಳಿಗೆ ಒದಗಿಸುವ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಅವರು ಒತ್ತಾಯ ಮಾಡುತ್ತಿದ್ದಾರೆ. ಅದೇ ವೇಳೆಯಲ್ಲಿ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಕೇಳುತ್ತಿರುವ ರೈತರ ಬೇಡಿಕೆಯನ್ನು ನ್ಯಾಯವಾದ ಕೂಲಿಯನ್ನು ಕೇಳುತ್ತಿರುವ ಕೃಷಿಕೂಲಿಕಾರರ ಬೇಡಿಕೆಗಳನ್ನು ತಮ್ಮ ಚಳುವಳಿಯ ಬೇಡಿಕೆಗಳನ್ನಾಗಿ ಮಾಡಿಕೊಂಡಿದ್ದಾರೆ.

ಕೇಂದ್ರ ಕಾರ್ಮಿಕ ಸಂಘಟನೆಗಳ ಮತ್ತು ರಾಷ್ಟ್ರೀಯ ಕಾರ್ಮಿಕ ಒಕ್ಕೂಟಗಳ ಕರೆಯ ಮೇರೆಗೆ ಕಾರ್ಮಿಕ ವರ್ಗವು ಸರ್ಕಾರದ ಮೂಲಭೂತ ಆರ್ಥಿಕ ಧೋರಣೆಗಳ ವಿರುದ್ಧ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮತ್ತು ಏಕಸ್ವಾಮ್ಯಸ್ಥ ಬಂಡವಾಳಗಾರರಿಗೆ ವಿಪರೀತ ರಿಯಾಯಿತಿಗಳನ್ನು ಕೊಡುತ್ತಿರುವುದರ ವಿರುದ್ಧ, ಜಮೀನ್ದಾರರೊಂದಿಗೆ ರಾಜಿ ಮಾಡಿಕೊಳ್ಳುವುದರ ವಿರುದ್ಧ ವಿದೇಶಿ ಸಾಲಗಳ ಮೇಲೆ ಬೆಳೆಯುತ್ತಿರುವ ಅವಲಂಬನೆಯ ವಿರುದ್ಧ, ತನ್ನ ರಕ್ಷಣೆಗಾಗಿ, ಶ್ರೀಸಾಮಾನ್ಯರ ರಕ್ಷಣೆಗಾಗಿ, ಐಕ್ಯ ಕಾರ್ಯಾಚರಣೆಗೆ ಇಳಿಯುತ್ತಿದೆ.

ಕಾರ್ಮಿಕವರ್ಗದ ಐಕ್ಯ ಪ್ರತಿರೋಧವು ಇಡೀ ಜನತೆಗೆ ಸ್ಫೂರ್ತಿ ಮತ್ತು ಸರ್ವಾಧಿಕಾರದ ವಿರುದ್ಧದ ಮತ್ತು ಪ್ರಜಾಸತ್ತಾತ್ಮಕ ಮುನ್ನಡೆಯ ಹೋರಾಟದ ಕಣಕ್ಕೆ ಅಸಂಘಟಿತ ಜನ ವಿಭಾಗಗಳನ್ನು ಸೆಳೆಯುತ್ತದೆ, ಎಂತಲೇ ಈ ಹೋರಾಟಕ್ಕೆ ಜನತೆ ಸಂಪೂರ್ಣ ಬೆಂಬಲವನ್ನು ಕೊಡಬೇಕಾಗಿದೆ.

ಭಾರತಕಮ್ಯುನಿಸ್ಟ್‌ಪಕ್ಷ (ಮಾರ್ಕ್ಸ್‌ವಾದ)ದ 11ನೆಯ ಕರ್ನಾಟಕ ರಾಜ್ಯ ಸಮ್ಮೇಳನವು 1982 ಜನವರಿಯ 19ರ ಮುಷ್ಕರವನ್ನು ಸಂಪೂರ್ಣ ಯಶಸ್ವಿಗೊಳಿಸಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ರಾಜ್ಯದಲ್ಲಿರುವ ಎಲ್ಲಾ ಘಟಕಗಳಿಗೆ ಕರೆಕೊಡುತ್ತದೆ. ಈ ಮುಷ್ಕರವನ್ನು ಬೆಂಬಲಿಸಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಸಮ್ಮೇಳನವು ಮನವಿ ಮಾಡಿಕೊಳ್ಳುತ್ತದೆ. ರೈತರ, ಕೃಷಿ ಕೂಲಿಕಾರರ, ವಿದ್ಯಾರ್ಥಿಗಳ, ಯುವಕರ ಮತ್ತು ಮಹಿಳೆಯರ ಸಂಘಟನೆಗಳಿಗೆ ಈ ಮುಷ್ಕರವನ್ನು ಸೌಹಾರ್ದವಾಗಿ ಬೆಂಬಲಿಸಬೇಕೆಂದು ಈ ಸಮ್ಮೇಳನವು ಕರೆಕೊಡುತ್ತದೆ.

ಅಂತರ್ರಾಷ್ಟ್ರೀಯ ಹಣಕಾಸು ನಿಧಿಯ ಸಾಲದ ವಿರುದ್ಧ

ಸ್ವಾತಂತ್ರ್ಯಾನಂತರದಿಂದಲೂ ನಮ್ಮ ದೇಶದ ಆಳುವ ವರ್ಗಗಳು ಅನುಸರಿಸಿಕೊಂಡು ಬಂದಿರುವ ಬಂಡವಾಳಶಾಹಿ ಆರ್ಥಿಕ ಧೋರಣೆಗಳಿಂದಾಗಿ ಸಾಮ್ರಾಜ್ಯಶಾಹಿ ದೇಶಗಳಿಂದ ಸಾಲ, ಸಹಾಯ, ಬಂಡವಾಳ, ತಂತ್ರಜ್ಞಾನಗಳ ಮೇಲಿನ ಅವಲಂಬನೆಯು ಹೆಚ್ಚುತ್ತಾ ಬಂದಿದೆ. ನಮ್ಮ ರಫ್ತುಗಳಿಕೆಯ ಸಿಂಹಪಾಲು ವಿದೇಶಿ ಸಾಲ ತೀರಿಸಲು ಮತ್ತು ಬಡ್ಡಿ ಪಾವತಿ ಮಾಡಲು ವ್ಯಯವಾಗುತ್ತಿದೆ. ದೇಶವು ಅನುಭವಿಸುತ್ತಿರುವ ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗುವ ಹತಾಶ ಪ್ರಯತ್ನಗಳ ಅಂಗವಾಗಿ ಇಂದಿರಾ ಸರಕಾರವು ಅಂತರ್ರಾಷ್ಟ್ರೀಯ ಹಣಕಾಸು ನಿಧಿಯಿಂದ 5700 ಕೋಟಿ ರೂಪಾಯಿಗಳ ಅಗಾಧ ಪ್ರಮಾಣದ ಸಾಲ ಪಡೆಯಲು ಒಪ್ಪಂದಮಾಡಿಕೊಂಡಿದೆ. ದೇಶದ ಆರ್ಥಿಕ ಧೋರಣೆಗಳಲ್ಲಿ ಹಸ್ತಕ್ಷೇಪ ಮಾಡುವ ಮುಕ್ತ ಅವಕಾಶವನ್ನು ಐ. ಎಂ. ಎಫ್.ಗೆ ಒದಗಿಸಿ ಕೊಡುವ ಅವಮಾನಕಾರಿ ಶರ್ತಗಳನ್ನು ಈ ಸಾಲಕ್ಕಾಗಿ ಒಪ್ಪುವ ಮೂಲಕ ಭಾರತ ಸರಕಾರವು ದೇಶದ ಸ್ವಾತಂತ್ರ್ಯ ಮತ್ತು ಗೌರವವನ್ನು ಸಾಮ್ರಾಜ್ಯಶಾಹಿಗಳಿಗೆ ಒತ್ತೆ ಇಟ್ಟಿದೆ. ತಾಂಜಾನಿಯಾದಂತಹ ತೃತೀಯ ಜಗತ್ತಿನ ರಾಷ್ಟ್ರಗಳು ಇಂತಹ ಅವಮಾನಕಾರಿ ಶರ್ತಗಳನ್ನು ಒಳಗೊಂಡ ಸಾಲವನ್ನು ತಿರಸ್ಕರಿಸಿರುವಾಗ, ಇಂದಿರಾ ಸರಕಾರವು ಈ ಶರ್ತಗಳನ್ನು ಒಪ್ಪಿರುವುದು ತೀರಾ ಖಂಡನೀಯವಾಗಿದೆ.

ಈ ಭಾರೀ ಮೊತ್ತದ ಸಾಲ ಪಡೆಯಲು ಇಂದಿರಾ ಸರಕಾರವು ಈಗಾಗಲೇ ಮುಷ್ಕರ ನಿಷೇಧ ಕಾಯಿದೆಯನ್ನು ಜ್ಯಾರಿಗೊಳಿಸಿದೆ. ಖಾಸಗೀ ರಂಗದ ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳಿಗೆ ಉತ್ಪಾದನೆ ಹೆಚ್ಚಿಸುವ ನೆಪದಲ್ಲಿ ಭಾರೀ ಪ್ರಮಾಣದ ಸಹಾಯ ಧನ ಮತ್ತು ತೆರಿಗೆ ರಿಯಾಯಿತಿ ಒದಗಿಸಿಕೊಟ್ಟಿದೆ. ಬಹುರಾಷ್ಟ್ರೀಯ ಸಂಸ್ಥೆಗಳು ನಮ್ಮ ದೇಶದಲ್ಲಿ ವ್ಯಾಪಾರ ನಡೆಸಲು ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿದೆ. ಆಮದು ನೀತಿಯನ್ನು ಸಡಿಲುಗೊಳಿಸಿದೆ. ಸರಕಾರದ ವೆಚ್ಚ ಕಡಿಮೆಮಾಡುವ ಶರತ್ತಿನಂತೆ ಸಾರ್ವಜನಿಕ ರಂಗದಲ್ಲಿನ ಅಭಿವೃದ್ಧಿ ಕಾರ್ಯಗಳನ್ನೂ, ಶಿಕ್ಷಣ, ಆರೋಗ್ಯ, ವಸತಿ, ಜೀವನಾವಶ್ಯಕ ವಸ್ತುಗಳ ಸಾರ್ವಜನಿಕ ವಿತರಣೆ, ಇತ್ಯಾದಿಗಳನ್ನೂ ಒಂದೊಂದಾಗಿ ಕೈಬಿಡುತ್ತಾ ಬಂದಿದೆ.

ಅತ್ಯಂತ ಅಪಾಯಕಾರಿ ಶರ್ತಗಳ ಆಧಾರದಲ್ಲಿ ಪಡೆಯುವ ಈ ಸಾಲವು ದೇಶದ ಸಮಸ್ಯೆಗಳನ್ನು ಯಾವುದೇ ರೀತಿಯಲ್ಲಿ ಪರಿಹರಿಸುವ ಬದಲು, ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತದೆ. ದೇಶದ ಸ್ವಾತಂತ್ರ್ಯಕ್ಕೂ ಧಕ್ಕೆ ತರುತ್ತದೆ. ಈ ಸಾಲದ ವಿರುದ್ಧ ಸಂಸತ್ತಿನಲ್ಲಿ ಹಾಗೂ ಹೊರಗೆ ತೀವ್ರ ವಿರೋಧ ಬಂದಿದೆ. ಈ ಸಾಲದಿಂದ ಆಗುವ ಅಪಾಯದ ಬಗ್ಗೆ ಪಶ್ಚಿಮ ಬಂಗಾಳ ಎಡರಂಗ ಸರ್ಕಾರವು ಒಂದು ಪುಸ್ತಕವನ್ನು ಪ್ರಕಟಿಸಿದೆ.

ಈ ಸಾಲದ ವಿರುದ್ಧ ಎಲ್ಲಾ ದೇಶಪ್ರೇಮಿಗಳೂ, ಪ್ರಜಾಪ್ರಭುತ್ವವಾದಿಗಳೂ ಐಕ್ಯ ಚಳುವಳಿಯನ್ನು ಸಂಘಟಿಸಬೇಕೆಂದು ಈ ಸಮ್ಮೇಳನವು ಕರೆಕೊಡುತ್ತದೆ.

ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹೆಚ್ಚುತ್ತಿರುವ ದಬ್ಬಾಳಿಕೆಯ ವಿರುದ್ಧ

ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದು. ಬೆಳೆಯುತ್ತಿರುವ ಹೋರಾಟಗಳನ್ನು ಪತ್ರಿಕೆಗಳು ಬೆಂಬಲಿಸಬೇಕಾದ ಪರಿಸ್ಥಿತಿ ಬಂದಿದ್ದು. ಪತ್ರಿಕೆಗಳು ಅವುಗಳಿಗೆ ಪ್ರಚಾರ ನೀಡುವುದು ಆಳುವ ವರ್ಗಗಳಿಗೆ ಸಹಿಸದಾಗಿದೆ. ಆದ್ದರಿಂದ ರೊಚ್ಚಿಗೆದ್ದ ಗುಂಡೂರಾಯರ ಸರಕಾರ ಪತ್ರಿಕಾ ಸ್ವಾತಂತ್ರ್ಯದ ಮೇಲೆ ತೀವ್ರ ಧಾಳಿ ನಡೆಸತೊಡಗಿದೆ.

ಮಾನ್ಯ ಮುಖ್ಯಮಂತ್ರಿ ಗುಂಡೂರಾಯರು ಪತ್ರಕರ್ತರನ್ನು "ನಾಯಿಗಳು" ಎಂದು ಹಿಯಾಳಿಸಿದ್ದಲ್ಲದೆ, ತಮ್ಮ ಅನುಯಾಯಿಗಳ ಮೂಲಕ ಪ್ರಮುಖ ದಿನಪತ್ರಿಕೆಗಳ ಕಛೇರಿಗಳಿಗೆ ದಿಗ್ಬಂಧನ ಹಾಕಿಸಿದ್ದನ್ನು ನಾವು ಮರೆಯುವಂತಿಲ್ಲ. ಪತ್ರಕರ್ತ ಲಂಕೇಶರ ಮೇಲೆ ಹಲ್ಲೆ, ದಾಂಡೇಲಿಯಲ್ಲಿ ಪೋಲೀಸ್ ದೌರ್ಜನ್ಯವನ್ನು ವರದಿ ಮಾಡಲು ಹೋದುದಕ್ಕಾಗಿ "ಸಂಯುಕ್ತ ಕರ್ನಾಟಕ" ಕಾರ್ಯಾಲಯಕ್ಕೆ ಬೆಂಕಿ ಹಾಕುವ ಬೆದರಿಕೆ, ಕೆ.ಜಿ.ಎಫ್. ನ ಪ್ರಜಾವಾಣಿ ವರದಿಗಾರನ ಮೇಲೆ ನಡೆದ ಧಾಳಿ ಹಾಗೂ ಇತ್ತೀಚೆಗೆ ಬಿಜಾಪುರದಲ್ಲಿ ಜಾತೀಯವಾದಿಗಳು ತಮ್ಮ ನೀಚತನವನ್ನು ಬಹಿರಂಗಗೊಳಿಸಿದ್ದಕ್ಕಾಗಿ ಪತ್ರಿಕಾಕರ್ತರನ್ನು ಜೀವಂತ ಸುಡುವ ಬೆದರಿಕೆ ಹಾಕಿದ್ದು, ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಒದಗಿರುವ ಗಂಡಾಂತರದ ಸೂಚನೆಯಾಗಿದೆ.

ಪತ್ರಿಕಾ ಸ್ವಾತಂತ್ರ್ಯಕ್ಕೆ ಒದಗಿರುವ ಈ ಗಂಡಾಂತರದ ವಿರುದ್ಧ ಸರ್ವ ವಿರೋಧ ಪಕ್ಷಗಳು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಹೋರಾಟ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯ ಸಮ್ಮೇಳನ ಒತ್ತಾಯಿಸುತ್ತದೆ. ಇಂತಹ ಘಟನೆಗಳ ವಿರುದ್ಧ ಪತ್ರಿಕಾಲಯಗಳಿಗೆ ಹಾಗೂ ಪತ್ರಕರ್ತರಿಗೆ ರಕ್ಷಣೆ ನೀಡಲಾಗದ ಸರ್ಕಾರದ ನಿರ್ಲಕ್ಷತನವನ್ನು ಸಮ್ಮೇಳನ ಖಂಡಿಸುತ್ತದೆ.

ನಗರಸಭೆ, ಪುರಸಭೆಗಳ ಚುನಾವಣೆ

ಅಧಿಕಾರದ ವಿಕೇಂದ್ರೀಕರಣವಾಗಬೇಕೆಂದು ಪೊಳ್ಳು ಘೋಷಣೆ ಮಾಡುತ್ತಿರುವ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರಕಾರ ಹಲವಾರು ವರ್ಷಗಳಿಂದ ಚುನಾವಣೆಯಾಗದಿರುವ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಮೊದಲಾದ ಕಾರ್ಪೊರೇಷನ್ ಮತ್ತು ಅನೇಕ ನಗರಸಭೆಗಳಿಗೆ ಚುನಾವಣೆ ನಡೆಸದೆ ನಾಗರೀಕ ಹಕ್ಕಿಗೆ ಗಧಾ ಪ್ರಹಾರ ಮಾಡಿದೆ. ಅಷ್ಟೇ ಅಲ್ಲದೆ ಇತ್ತೀಚೆಗೆ ಕಾರ್ಪೊರೇಷನ್ ಆಗಿ ಪರಿವರ್ತನೆಗೊಂಡ ಗುಲ್ಬರ್ಗಾ, ಮಂಗಳೂರು ಕಾರ್ಪೊರೇಷನ್‌ಗಳಿಗೂ ಚುನಾವಣೆ ನಡೆಸದೆ, ಮೇಯರ್, ಉಪಮೇಯರ್, ನಾಮಕರಣ ಮಾಡಬೇಕೆಂಬ ರಾಜ್ಯಸರಕಾರದ ನಿರ್ಣಯ ಪ್ರಜಾಪ್ರಭುತ್ವಕ್ಕೆ ವಿರೋಧಿಯಾಗಿದ್ದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ 11ನೇ ಸಮ್ಮೇಳನ ಸರಕಾರದ ಈ ನೀತಿಯನ್ನು ಬಲವಾಗಿ ಖಂಡಿಸಿ, ಈಗಾಗಲೇ ನಡೆಯಬೇಕಾಗಿದ್ದ ಎಲ್ಲ ಕಾರ್ಪೊರೇಷನ್, ನಗರಸಭೆಗಳಿಗೂ ಹಾಗೆಯೇ ಈಗ ಕಾರ್ಪೊರೇಷನ್ ಆಗಿ ಪರಿವರ್ತನೆಗೊಂಡ ಗುಲ್ಬರ್ಗಾ, ಮಂಗಳೂರು ಕಾರ್ಪೊರೇಷನ್‌ಗಳಿಗೂ ಕೂಡಲೇ ಚುನಾವಣೆ ನಡೆಸಬೇಕೆಂದು ರಾಜ್ಯಸರಕಾರವನ್ನು ಒತ್ತಾಯಮಾಡುತ್ತದೆ.

ನಗರಸಭೆ, ಪುರಸಭೆಗಳಿಗೆ ಕೂಡಲೇ ಚುನಾವಣೆ ನಡೆಸಬೇಕೆಂದು ಸರಕಾರದ ಮೇಲೆ ಒತ್ತಾಯ ತರುವ ಸಲುವಾಗಿ ಎಲ್ಲ ವಿರೋಧಿ ಪಕ್ಷಗಳೂ ಒಟ್ಟಾಗಿ ಹೋರಾಟಮಾಡಬೇಕೆಂದು ನಿರ್ಣಯಿಸಿರುವುದನ್ನು ಈ ಸಮ್ಮೇಳನ ಸ್ವಾಗತಿಸಿ, ಹೋರಾಟ ತೀವ್ರಗೊಳಿಸುವಂತೆ ಈ ಸಮ್ಮೇಳನ ವಿರೋಧ ಪಕ್ಷಗಳಿಗೆ ಕೇಳಿಕೊಳ್ಳುತ್ತದೆ. ಅಂತಹ ಹೋರಾಟಕ್ಕೆ ಪಾರ್ಟಿ ಸಂಪೂರ್ಣ ಬೆಂಬಲ ವ್ಯಕ್ತಮಾಡುತ್ತದೆ.

ಮಂತ್ರಿಮಂಡಲದ ಸಭೆಗಳು

ಜನಸಂಪರ್ಕ ಬೆಳೆಸುವ ದೃಷ್ಟಿಯಿಂದಲೂ, ಜನರ ಸಮಸ್ಯೆಗಳನ್ನು ಸ್ಥಳದಲ್ಲೇ ತಿಳಿದು ನಿರ್ಣಯ ಕೈಗೊಳ್ಳಲು ಅನುಕೂಲವಾಗುತ್ತದೆಂದು ಹೇಳಿ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರು ಮಂತ್ರಿಮಂಡಲದ ಸಭೆಗಳನ್ನು ವಿಭಾಗ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸೇರಿಸಲು ಪ್ರಾರಂಭಿಸಿದ್ದಾರೆ. ಈಗಾಗಲೇ ಮುಕ್ತಾಯವಾದ ಬೆಳಗಾವಿ, ಗುಲ್ಬರ್ಗಾ, ಮೈಸೂರುಗಳಲ್ಲಿಯ ಮಂತ್ರಿಮಂಡಲದ ಸಭೆಗಳಿಗಾಗಿ ಲಕ್ಷಾವಧಿ ರೂಪಾಯಿ ವಿನಾಕಾರಣ ಅಪವ್ಯಯವಾಗಿದೆಯಲ್ಲದೆ, ಮಂತ್ರಿಗಳ ಪ್ರಚಾರಕ್ಕೆ ಸಾಧನೆಯಾಗಿದೆಯಲ್ಲದೆ, ಸುಳ್ಳು ಆಶ್ವಾಸನೆಗಳಿಗೆ ತವರು ಮನೆಯಾಗಿದೆಯಲ್ಲದೆ, ಆಯಾ ವಿಭಾಗದ ಜಿಲ್ಲೆಯ ಜನತೆ ಎದುರಿಸುತ್ತಿರುವ ಪ್ರಾಮುಖ್ಯ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಫಲಗೊಂಡಿದೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ಅತಿ ಅಗ್ಗದ ಪ್ರಚಾರಕ್ಕಾಗಿ ಈ ರೀತಿ ಹಣ ಪೋಲುಮಾಡಿ ರಾಜ್ಯದ

(7ನೇ ಪುಟ ನೋಡಿ)

ರೈತ ಸಂಘದ ಸಮ್ಮೇಳನಗಳು

ಕುಂಬಳೆ :

ಕಾಸರಗೋಡು ತಾಲೂಕು ಕುಂಬಳೆ ಪಂಚಾಯತ್ ರೈತ ಸಂಘದ ವಾರ್ಷಿಕ ಸಮ್ಮೇಳನ 6-12-81 ರಂದು ಕುಂಬಳೆಯಲ್ಲಿ ಜರುಗಿತು.

ರೈತ ಸಂಘದ ಕುಂಬಳೆ ಪಂಚಾಯತ್ ಕಾರ್ಯದರ್ಶಿ ವಿಶ್ವನಾಥ ಆಳ್ವರು ವರದಿ ಒಪ್ಪಿಸಿದರು. ಸಭೆಯ ಅಧ್ಯಕ್ಷತೆಯನ್ನು ರೈತ ಸಂಘದ ಪಂಚಾಯತ್ ಅಧ್ಯಕ್ಷರಾದ ಕಾಂ. ಭಂಡಾರಿ ಶೆಟ್ಟಿಯವರು ವಹಿಸಿದ್ದರು.

ಮಂಜೇಶ್ವರ ಬ್ಲೋಕ್ ರೈತ ಸಂಘದ ಕಾರ್ಯದರ್ಶಿ ಕಾಂ. ಅಬೂಬಕ್ಕರ್, ಅಧ್ಯಕ್ಷ ಕಾಂ. ರಾಮಚಂದ್ರ ಗಟ್ಟಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ನಂತರ ರೈತ ಸಂಘದ ಕುಂಬಳೆ ಪಂಚಾಯತ್ ಸಮಿತಿಗೆ ಈ ಕೆಳಕಂಡ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು.

ಅಧ್ಯಕ್ಷರಾಗಿ ಕಾಂ. ಭಂಡಾರಿ ಶೆಟ್ಟಿ, ಉಪಾಧ್ಯಕ್ಷರಾಗಿ ಕಾಂ. ಬಟ್ಯಪ್ಪಗಟ್ಟಿ, ಕಾರ್ಯದರ್ಶಿ ಕಾಂ. ವಿಶ್ವನಾಥಆಳ್ವ, ಜತೆಕಾರ್ಯದರ್ಶಿ ಸೀನ ಪೂಜಾರಿ ಇವರನ್ನೊಳಗೊಂಡ 10 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಪೆರ್ಲ :

ಕಾಸರಗೋಡು ತಾಲೂಕು ಎಣ್ಮಕಜೆ ಪಂಚಾಯತ್ ರೈತ ಸಂಘದ ವಾರ್ಷಿಕ ಸಮ್ಮೇಳನ 5-12-81ರಂದು ಪೆರ್ಲದಲ್ಲಿ ಜರಗಿ 13 ಜನರಿರುವ ಕಾರ್ಯಕಾರಿ ಸಮಿತಿ ರಚಿಸಿ ಹೊಸವರ್ಷಕ್ಕೆ ಕಾಂ. ಕೆ. ಪಿ. ಮದನ ಮಾಸ್ತರರನ್ನು ಅಧ್ಯಕ್ಷರನ್ನಾಗಿಯೂ, ಕಾಂ. ಕೃಷ್ಣ ನಾಯ್ಕರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು.

ಸಾಯಂಕಾಲ ಪೆರ್ಲ ಗಾಂಧಿಕಟ್ಟೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಸಭೆಯಲ್ಲಿ ಮಂಜೇಶ್ವರ ಬ್ಲೋಕ್ ರೈತಸಂಘದ ಅಧ್ಯಕ್ಷ ಎಮ್. ರಾಮಚಂದ್ರಗಟ್ಟಿ, ಕಾರ್ಯದರ್ಶಿ ಪಿ. ಅಬೂಬಕ್ಕರ್ ಮಾತನಾಡಿದರು.

ಸಿ.ಪಿ.ಐ. ಗೆ ರಾಜೀನಾಮೆ

ಉತ್ತರ ಪ್ರದೇಶದ ಅಲೀಗಡ ಜಿಲ್ಲೆಯ ಖ್ಯಾತ ಸಿ.ಪಿ.ಐ. ಮುಂದಾಳುಗಳು ತಮ್ಮ ಪಕ್ಷಕ್ಕೆ ರಾಜೀನಾಮೆ ನೀಡಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಸೇರುವ ಇಚ್ಛೆ ವ್ಯಕ್ತಪಡಿಸಿದ್ದಾರೆ.

ಸಿ.ಪಿ.ಐ ಪಕ್ಷದ ಕಾರ್ಯನಿರ್ವಹಣೆ ಬಗ್ಗೆ, ಪರಿಷ್ಕರಣವಾದಕ್ಕೆ ಬೇಸತ್ತು ಹೊರಬಂದಿರುವ ಸುಮಾರು 400 ಕಾರ್ಯಕರ್ತರು ಹೇಳಿಕೆಯೊಂದನ್ನು ಹೊರಡಿಸಿ ಈ ವಿಷಯ ತಿಳಿಸಿದ್ದಾರೆ. ಇವರಲ್ಲಿ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಕೌನ್ಸಿಲ್ ಸದಸ್ಯರುಗಳೂ ಸೇರಿದ್ದಾರೆ. ಸಿ.ಪಿ.ಐ. ನಿಂದ ಹೊರಬಂದಿರುವವರಲ್ಲಿ ಪ್ರಮುಖರು: ಪಿ.ಎಲ್.ಶರ್ಮಾ, ಮಹಾವೀರ ಸಿಂಗ್, ಡಿ. ಸಿಂಗ್, ರಾಮ್ ಲಾಲ್, ರಾಜ್‌ಸಿಂಗ್ ಮತ್ತಿತರರು.

ಈ ಕೆಳಕಂಡ ಘಟಕಗಳು ಸಿ.ಪಿ.ಐ ನಿಂದ ಹೊರಬಂದಿವೆ: ಮೀರಪುರ (28 ಸದಸ್ಯರು). ಪಿಸ್ವಾವಾ (34 ಸದಸ್ಯರು). ಜವಾರಿ (60 ಸದಸ್ಯರು), ಅರ್ಹೌಲಾ (26 ಸದಸ್ಯರು), ಬಜುಂತಾ (10 ಸದಸ್ಯರು), ಖೀರಪುರ (14 ಸದಸ್ಯರು). ಜೈರುಲಿಯಾ (18 ಸದಸ್ಯರು). ಖಿರೇಡ (12 ಸದಸ್ಯರು), ಪಿಟ್ರ (24 ಸದಸ್ಯರು), ಗಾಜಿರ್‌ಪುರ (25 ಸದಸ್ಯರು). ಬಿಲ್‌ಪುರಾ (12 ಸದಸ್ಯರು) ಮತ್ತು ಸಾಥಾ (7 ಸದಸ್ಯರು).

ಗ್ರಿಂಡ್ಲೆ ಬ್ಯಾಂಕ್ ನೌಕರರಿಗೆ ಬೆಂಬಲ

ಗ್ರಿಂಡ್ಲೆ ಬ್ಯಾಂಕ್ ಆಡಳಿತ ವರ್ಗದ ಕಾರ್ಮಿಕವಿರೋಧಿ ನೀತಿಗಳ ವಿರೋಧವಾಗಿ ಹೋರಾಡುತ್ತಿರುವ ಗ್ರಿಂಡ್ಲೆ ಬ್ಯಾಂಕ್ ನೌಕರರಿಗೆ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ತನ್ನ ಬೆಂಬಲ ಸೂಚಿಸಿದೆ. 93 ದಿನ ವಿರೋಚಿತ ಹೋರಾಟದ ನಂತರ ಕನ್ಸಿಲಿಯೇಷನ್ ನಡೆದು ಒಪ್ಪಂದಕ್ಕೆ ಬಂದ ಅಂಶಗಳನ್ನು ಮಾನ್ಯತೆಮಾಡಲು ಗ್ರಿಂಡ್ಲೆ ಬ್ಯಾಂಕ್ ಆಡಳಿತವರ್ಗ ಸಮ್ಮತಿಸುತ್ತಿಲ್ಲ.

ಈ ಕುರಿತು ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ (ಸಿ.ಬಿ.ಎಸ್.ಯು.)ನ ಉಪಾಧ್ಯಕ್ಷ ಕಾಂ. ಎಸ್. ರೇವಣ್ಣ ಹೇಳಿಕೆಯೊಂದನ್ನು ಹೊರಡಿಸಿ ಗ್ರಿಂಡ್ಲೆ ಬ್ಯಾಂಕ್ ಆಡಳಿತದ ಧೋರಣೆಯನ್ನು ಖಂಡಿಸಿದ್ದಾರೆ.

ಮುಂಬೈಯಲ್ಲಿ ಬೃಹತ್ ಮತಪ್ರದರ್ಶನ

ಮುಂಬೈಯ "ಹಿಂದೂಸ್ತಾನ ಫೆರೆಡೋ" ಕಾರ್ಖಾನೆಯ 2500 ಕಾರ್ಮಿಕರು ಕಳೆದ ನಾಲ್ಕು ತಿಂಗಳಿಂದ ಮುಷ್ಕರದಲ್ಲಿದ್ದಾರೆ. ಮುಷ್ಕರ ನಿರತ ಕಾರ್ಮಿಕರಿಗೆ ಬೆಂಬಲ ಸೂಚಿಸಿ ಮತ್ತು ಮುಂಬೈ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲೂ ಸುಮಾರು 300 ಕಾರ್ಖಾನೆಗಳನ್ನು ಮುಚ್ಚುತ್ತಿರುವುದನ್ನು ಪ್ರತಿಭಟಿಸಿ ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಇಂಜಿನೀಯರಿಂಗ್ ವರ್ಕರ್ಸ್ ಯೂನಿಯನ್‌ಗೆ ಸೇರಿದ 150 ಫ್ಯಾಕ್ಟರಿಗಳ ಸುಮಾರು 20,000 ಕಾರ್ಮಿಕರು ನವೆಂಬರ್ 17ರಂದು ಮುಂಬೈಯಲ್ಲಿ ಬೃಹತ್ ಮತಪ್ರದರ್ಶನ ನಡೆಸಿದರು.

ಆಝಾದ ಮೈದಾನದಿಂದ ಪ್ರಾರಂಭವಾದ ಬೃಹತ್ ಮೆರವಣಿಗೆಯಲ್ಲಿ ಸಚಿವಾಲಯಕ್ಕೆ ತೆರಳಿ ಕಾರ್ಮಿಕರು ಮತಪ್ರದರ್ಶನ ನಡೆಸಿದರು. ಮಹಾರಾಷ್ಟ್ರದ ಅಂತುಲೆ ಸರಕಾರದ ಕಾರ್ಮಿಕವಿರೋಧಿ ನೀತಿಯನ್ನು ಪ್ರತಿಭಟಿಸಿ ಘೋಷಣೆಗಳು ಮೊಳಗಿದವು.

ಕಾಂ. ಪಿ.ಕೆ. ಕುರಣೆಯವರ ನೇತೃತ್ವದಲ್ಲಿ ಕಾರ್ಮಿಕ ಮುಖಂಡರ ನಿಯೋಗವೊಂದು ಕಾರ್ಮಿಕ ಮಂತ್ರಿಯವರನ್ನು ಭೇಟಿಮಾಡಿತು. ಕಾರ್ಮಿಕ ಮಂತ್ರಿ ಶ್ರೀ ಎಸ್. ಎಮ್. ತಿಡ್ಕೆಯವರು ನಿಯೋಗದೊಂದಿಗೆ ಭೇಟಿ ಮಾಡಿ "ಹಿಂದೂಸ್ತಾನ್ ಫೆರೆಡೋ" ಕಾರ್ಖಾನೆಯ ವಿವಾದವನ್ನು ಶೀಘ್ರ ಬಗೆಹರಿಸುವ ಮತ್ತು ಮುಚ್ಚಿರುವ ಕಾರ್ಖಾನೆಗಳನ್ನು ತೆಗೆಯಿಸುವಲ್ಲಿ ಕ್ರಮಕೈಗೊಳ್ಳುವ ಆಶ್ವಾಸನೆ ನೀಡಿದರು.

ಮೆರವಣಿಗೆಗೆ ಮುನ್ನ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಎಸ್. ವಾಮರ್, ಕೊಲ್ಹಾಟಕರ ಮತ್ತಿತರರು ಮಾತನಾಡಿ ಸರಕಾರದ ದುರಾಡಳಿತವನ್ನು ಖಂಡಿಸಿದರು.

○

ಸಮ್ಮೇಳನವು ಕೈಕೊಂಡ ನಿರ್ಣಯಗಳು

(6ನೇ ಪುಟದಿಂದ)

ಬೇರೆಬೇರೆ ಕಡೆಗಳಲ್ಲಿ ಮಂತ್ರಿಮಂಡಲದ ಸಭೆಕರೆಯುತ್ತಿರುವುದನ್ನು ಕರ್ನಾಟಕ ರಾಜ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ 11ನೇ ಸಮ್ಮೇಳನ ಬಲವಾಗಿ ಖಂಡಿಸುತ್ತದೆ.

ಬೆಂಗಳೂರು ಬಿಟ್ಟು ಹೊರಗಡೆ ಈ ರೀತಿ ಮಂತ್ರಿಮಂಡಲದ ಸಭೆ ಕರೆಯುವುದರಿಂದ ಯಾವ ಪುರುಷಾರ್ಥವೂ ಸಾಧಿಸುವುದಿಲ್ಲವೆಂದು ತಿಳಿದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಇತರ ವಿರೋಧಿ ಪಕ್ಷದವರೊಡನೆ ಸೇರಿ ಮಂತ್ರಿಮಂಡಲ ಸೇರಿದಾಗ' ಬೆಳಗಾವಿ, ಗುಲ್ಬರ್ಗಾ, ಮೈಸೂರುಗಳಲ್ಲಿ ಬಂದ ಮತಪ್ರದರ್ಶನ ರೂಪದಲ್ಲಿ ಪ್ರತಿಭಟನೆ ವ್ಯಕ್ತಮಾಡಿದ್ದನ್ನು ಈ ಸಮ್ಮೇಳನ ಸ್ವಾಗತಿಸಿ ಸರಕಾರದ ಈ ನೀತಿಯ ವಿರುದ್ಧ ಇನ್ನೂ ತೀವ್ರ ಹೋರಾಟ ನಡೆಸಲು ಜನರಿಗೆ ಕರೆಕೊಡುತ್ತದೆ.

ರಾಜ್ಯದಲ್ಲಿ ರೇಲ್ವೆ ಅಭಿವೃದ್ಧಿಯಾಗಬೇಕು

ಕಳೆದ 32 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಕರ್ನಾಟಕದವರೇ ಹೆಚ್ಚಾಗಿ ರೇಲ್ವೆ ಮಂತ್ರಿಗಳಾಗಿದ್ದರೂ ಕೂಡ, ನಮ್ಮ ರಾಜ್ಯದಲ್ಲಿರುವ ಮೀಟರ್ ಗೇಜ್ ರೇಲ್ವೆಗಳು ಬ್ರಾಡ್‌ಗೇಜಾಗಿ ಪರಿವರ್ತನೆಯಾಗದಿರುವುದರಿಂದ ಸಾರ್ವಜನಿಕರ ಪ್ರಯಾಣಕ್ಕೂ, ಸರಕು ಸಾಗಾಣಿಕೆಗೂ ಬಹಳ ಅನಾನುಕೂಲವಾಗಿದೆ.

ಮಿರಜ್-ಬೆಂಗಳೂರು, ಹುಬ್ಬಳ್ಳಿ-ಸೋಲಾಪುರ, ಹುಬ್ಬಳ್ಳಿ-ಗುಂತಕಲ್-ಬೆಂಗಳೂರು, ಬೆಂಗಳೂರು-ಮೈಸೂರು, ಚಾಮರಾಜನಗರ-ಸತ್ಯಮಂಗಲ, ಕಡೂರು-ಸಕಲೇಶಪುರ, ಹಾಸನ-ಮಂಗಳೂರು ರೇಲ್ವೆಗಳನ್ನು ಬ್ರಾಡ್‌ಗೇಜಾಗಿ ಪರಿವರ್ತನೆ ಮಾಡುವುದು ಅತ್ಯಗತ್ಯ. ಇದರ ಜೊತೆಯಲ್ಲೇ ಹುಬ್ಬಳ್ಳಿ-ಕಾರವಾರ, ಮುಂಬಯಿ-ಮಂಗಳೂರು ಕರಾವಳಿ ರೇಲ್ವೆ ಹಾಗೆಯೇ ವಾಡಿ-ಹುಬ್ಬಳ್ಳಿ ರೇಲ್ವೆಗಳ ಕೆಲಸ ಮುಗಿದಿದ್ದರೂ, ಕಾರ್ಯಪ್ರಾರಂಭ ಮಾಡದಿರುವುದರಿಂದ ಅಪಾರ ಅನ್ಯಾಯವಾಗಿದೆ. ರಾಜ್ಯದ ಅಭಿವೃದ್ಧಿಗೆ ಬ್ರಾಡ್‌ಗೇಜ್ ರೇಲ್ವೆ ಅತ್ಯಗತ್ಯ. ಖನಿಜ, ಅರಣ್ಯಸಂಪತ್ತು, ಬಂದರ ಮತ್ತು ಕೈಗಾರಿಕೆ, ವ್ಯಾಪಾರ ಬೆಳವಣಿಗೆಯಾಗಬೇಕಾದರೂ ಬ್ರಾಡ್‌ಗೇಜ್ ರೇಲ್ವೆ ಅತ್ಯಗತ್ಯ.

ರಾಜ್ಯದ ಅಭಿವೃದ್ಧಿಗಾಗಿ, ಜನರಿಗೆ ಸೌಕರ್ಯ ಒದಗಿಸಿಕೊಡಲು ಈಗಿರುವ ಮೀಟರ್‌ಗೇಜನ್ನು ಬ್ರಾಡ್‌ಗೇಜಾಗಿ ಪರಿವರ್ತಿಸಬೇಕೆಂದೂ, ಕರಾವಳಿ ರೇಲ್ವೆ, ಹುಬ್ಬಳ್ಳಿ-ಕಾರವಾರ ರೇಲ್ವೆ, ವಾಡಿ-ಹುಬ್ಬಳ್ಳಿ ರೇಲ್ವೆ ಕೆಲಸಗಳನ್ನು ಕೂಡಲೇ ಪ್ರಾರಂಭಿಸುವಂತೆ ಕೇಂದ್ರದ ಮೇಲೆ ಒತ್ತಾಯ ತರಬೇಕೆಂದೂ ರಾಜ್ಯಸರಕಾರವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮ್ಮೇಳನವು ಒತ್ತಾಯಿಸುತ್ತದೆ.

[ಸಮ್ಮೇಳನ ಅಂಗೀಕರಿಸಿದ ಇನ್ನೂ ಕೆಲವು ನಿರ್ಣಯಗಳನ್ನು ಮುಂದಿನ ವಾರ ಪ್ರಕಟಿಸಲಾಗುವುದು.]

○

ಎಸ್. ಎಫ್. ಐ. ಸ್ಥಾಪನೆಯ ಹಿನ್ನೆಲೆ

(4ನೇ ಪುಟದಿಂದ)

ದಿತು. ಸಭೆಯ ನಂತರ "ಕ್ಲೈವ್ ಹೌಸ್" ಮೈದಾನದಲ್ಲಿ ಭಾರೀ ಮೆರವಣಿಗೆ ನಡೆಯಿತು.

ಸ್ವಾಗತ ಸಮಿತಿಯ ತೀರ್ಮಾನದಂತೆ ತಿರುವನಂತಪುರದಲ್ಲಿ 1970ರ ಡಿಸೆಂಬರ್ 27ರಿಂದ 30ರವರೆಗೆ ಎಸ್. ಎಫ್. ಐ.ನ ಸಮ್ಮೇಳನ ನಡೆಯಿತು. ಸಮ್ಮೇಳನವನ್ನು ಕೇರಳದ ಅತ್ಯಂತ ಜನಪ್ರಿಯ ರೈತ ಮುಖಂಡರಾಗಿದ್ದ ಕಾಂ. ಎ. ಕೆ. ಗೋಪಾಲನ್ ಅವರು ಉದ್ಘಾಟಿಸಿದ್ದರು. 624 ಮಂದಿ ಪ್ರತಿನಿಧಿಗಳೂ ಮತ್ತು 127 ವೀಕ್ಷಕರೂ ಭಾಗವಹಿಸಿದ ಈ ಸಮ್ಮೇಳನದಲ್ಲಿ ಎಸ್. ಎಫ್. ಐ.ನ ಕಾರ್ಯಕ್ರಮ ಹಾಗೂ ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಸಮ್ಮೇಳನವು 29 ಮಂದಿಯ ಕಾರ್ಯಕಾರೀ ಸಮಿತಿಯನ್ನು ಆಯ್ಕೆಮಾಡಿ ಅದರ ಅಧ್ಯಕ್ಷರನ್ನಾಗಿ ಸಿ.ಭಾಸ್ಕರನ್ ಹಾಗೂ ಪ್ರಧಾನಕಾರ್ಯದರ್ಶಿಯನ್ನಾಗಿ ಬಿಮನ್ ಬಸು ಅವರನ್ನು ಚುನಾಯಿಸಿತು. ನಗರದ ಚರಿತ್ರೆಯಲ್ಲೇ ಹಿಂದೆಂದೂ ನಡೆದಿರದಂತಹ ಬೃಹತ್ ವಿದ್ಯಾರ್ಥಿ ಪ್ರದರ್ಶನವನ್ನು ಸಮ್ಮೇಳನದ ಕೊನೆಯ ದಿನ ನಡೆಸಲಾಯಿತು.

○

ಬೃಹತ್ ರ್ಯಾಲಿ; ಬಹಿರಂಗ ಸಭೆ

(1ನೇ ಪುಟದಿಂದ)

ಮಂಡಿಸಿದೊಡನೆ ಪ್ರತಿನಿಧಿಗಳು ಎದ್ದು ನಿಂತು ಎರಡು ನಿಮಿಷ ಮೌನವಾಚರಿಸಿದರು.

ನಂತರ ಕಾಂ. ಕೊರಗಪ್ಪರೈಯವರು ದಿವಂಗತ ಕಾಂ. ಎ. ಕೆ. ನಾರಾಯಣರಿಗೆ ಶ್ರದ್ಧಾಂಜಲಿ ಅರ್ಪಿಸುವ ಸೂಚನೆ ಮಂಡಿಸಿ ಅವರು ಪಕ್ಷಕ್ಕೆ, ಕಾರ್ಮಿಕ ಸಂಘಟನೆಗೆ ಸಲ್ಲಿಸಿದ ಸೇವೆಯನ್ನು, ಸಮ್ಮೇಳನದ ಸ್ಥಳ (veune)ಕ್ಕೆ ಕಾಂ. ಎ. ಕೆ. ನಾರಾಯಣ ನಗರ ಎಂದು ಹೆಸರಿಸಿದ್ದ ಔಚಿತ್ಯದ ಕುರಿತು ಪ್ರತಿನಿಧಿಗಳಿಗೆ ತಿಳಿಯಪಡಿಸಿದರು.

ಉದ್ಘಾಟನೆ

ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್‌ರು ಸಮ್ಮೇಳನವನ್ನು ಉದ್ಘಾಟಿಸಿದರು. (ವಿವರ 3ನೇ ಪುಟದಲ್ಲಿದೆ) ಕಾಂ. ಇ.ಎಂ.ಎಸ್.ರು ತಮ್ಮ ಭಾಷಣದಲ್ಲಿ ಪ್ರಸಕ್ತ ರಾಷ್ಟ್ರೀಯ ಪರಿಸ್ಥಿತಿಯ ಕುರಿತು ವಿಷದವಾಗಿ ವಿವರಿಸಿದರು. ಇಂದಿರಾ ಕಾಂಗ್ರೆಸ್‌ನ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಜನತೆಯನ್ನು ಸಂಘಟಿಸಬೇಕಾದ ಅವಶ್ಯಕತೆ ಕುರಿತು ಒತ್ತಿ ಹೇಳಿದರು.

ಕಾರ್ಯದರ್ಶಿಯವರಿಂದ ವರದಿ

ನಂತರ ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಕಾಂ. ಎಂ.ಕೆ. ಭಟ್‌ರು ರಾಷ್ಟ್ರೀಯ-ಅಂತರಾಷ್ಟ್ರೀಯ ಪ್ರಸಕ್ತ ರಾಜಕೀಯ ಪರಿಸ್ಥಿತಿ, ರಾಜ್ಯದ ರಾಜಕೀಯ ಪರಿಸ್ಥಿತಿ, ಪಕ್ಷದ ಚಟುವಟಿಕೆಗಳನ್ನೊಳಗೊಂಡ ಸುದೀರ್ಘ ವರದಿ ಸಲ್ಲಿಸಿದರು.

ಕಾಂ. ಎಂ. ಕೆ. ಯವರು ವರದಿ ಸಲ್ಲಿಸುವ ಮುನ್ನ ಕಾಂ. ಇ.ಎಂ.ಎಸ್.ರು ಜಲಂಧರನಲ್ಲಿ ಪಕ್ಷ ಅಂಗೀಕರಿಸಿದ ಧೋರಣೆಗಳನ್ನು, ಅನಂತರದ ಬೆಳವಣಿಗೆಗಳನ್ನು ವಿವರಿಸಿದರು. ಜಲಂಧರದ ರಿವ್ಯೂರಿಪೋರ್ಟ್, 1980ರ ಚುನಾವಣಾ ವಿಮರ್ಶೆ ಮಂತ್ರಿತರ ದಸ್ತಾವೇಜುಗಳನ್ನು ಗಂಭೀರವಾಗಿ ಅಭ್ಯಸಿಸಬೇಕೆಂದು ತಿಳಿಸಿ ರಾಜ್ಯ ಕಾರ್ಯದರ್ಶಿ ಕೊಡಲಿರುವ ವರದಿಯ ಕುರಿತು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಚರ್ಚಿಸಲು ತಿಳಿಸಿದರು.

ಚರ್ಚೆ

ದಿನಾಂಕ 12 ಮತ್ತು 13ರಂದು ಎರಡು ದಿನಗಳ ಕಾಲ ವರದಿಯ ಮೇಲೆ ಸುದೀರ್ಘ ಚರ್ಚೆನಡೆಯಿತು. ಭಾಗವಹಿಸಿದ್ದ 193 ಪ್ರತಿನಿಧಿಗಳ ಪೈಕಿ ಸಮಯವನ್ನು ನಿಗದಿಪಡಿಸಿಕೊಂಡು ಎಲ್ಲಾ ಜಿಲ್ಲೆಗಳನ್ನು ಪ್ರತಿನಿಧಿಸುವ 59 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಚರ್ಚೆಯಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳು ಪರಿಪೂರ್ಣವಾಗಿ ಸಿದ್ಧಪಡಿಸಿದ ವರದಿಯನ್ನು ಶ್ಲಾಘಿಸುತ್ತಾ ಟೀಕೆ ಮತ್ತು ಸ್ವಯಂಟೀಕೆ ಆಧಾರದಲ್ಲಿ ಕೈಬಿಟ್ಟು ಹೋದ ಕೆಲವು ಅಂಶಗಳ ಕುರಿತು ಗಮನಸೆಳೆದರು. ಕೆಲವೊಂದು ತಿದ್ದುಪಡಿಗಳೊಂದಿಗೆ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನ ನಡೆಯುತ್ತಿರುವಾಗ ಕೆ.ಜಿ.ಎಫ್.ನ ಪಕ್ಷದ ನಿಷ್ಠಾವಂತ ಕಾರ್ಯಕರ್ತ, ಕಾರ್ಮಿಕ ಮುಂದಾಳು ಕಾಂ. ಧನ್‌ಸಿಂಗರು ಹಠಾತ್ ನಿಧನರಾದ ವಾರ್ತೆ ಬಂದಿತು. ಪ್ರತಿನಿಧಿಗಳು ಕಾಂ. ಧನ್‌ಸಿಂಗರಿಗೆ ಎದ್ದು ನಿಂತು ಶ್ರದ್ಧಾಂಜಲಿಯನ್ನರ್ಪಿಸಿದರು.

ಚುನಾವಣೆ

ಈ ಸಮ್ಮೇಳನದಲ್ಲಿ 21 ಸದಸ್ಯರ ರಾಜ್ಯ ಸಮಿತಿಯನ್ನು ಆಯ್ಕೆಮಾಡಿ, 17 ಸದಸ್ಯರನ್ನು ಚುನಾಯಿಸಲಾಯಿತು. ಉಳಿದ ನಾಲ್ಕು ಮಂದಿಯನ್ನು ರಾಜ್ಯಸಮಿತಿಗೆ ಸೇರಿಸಿಕೊಳ್ಳಲು ಅಧಿಕಾರ ನೀಡಲಾಯಿತು. ಹೊಸ ರಾಜ್ಯಸಮಿತಿಯು ಕಾಂ. ಎಂ. ಕೆ. ಭಟ್ ಅವರನ್ನು ಕಾರ್ಯದರ್ಶಿಯನ್ನಾಗಿ ಪುನರಾಯ್ಕೆ ಮಾಡಿದೆ.

ವಿಜಯವಾಡಾದಲ್ಲಿ ಜನವರಿ 26ರಿಂದ ಪ್ರಾರಂಭವಾಗಲಿರುವ ಪಕ್ಷದ ಅಖಿಲ ಭಾರತ 11ನೇ ಅಧಿವೇಶನಕ್ಕೆ ಕಾಂ. ಎನ್. ಎಲ್. ಉಪಾಧ್ಯಾಯ, ಎಸ್. ಸೂರ್ಯನಾರಾಯಣ ರಾವ್, ಪಿ. ರಾಮಚಂದ್ರರಾವ್ ಇವರುಗಳನ್ನು ಪ್ರತಿನಿಧಿಗಳನ್ನಾಗಿಯೂ, ಕಾಂ. ವಿ. ಜೆ. ಕೆ. ನಾಯರ್, ಸಿ. ನಂಜುಂಡಪ್ಪ ಮತ್ತು ಕಾಂ. ಕೆ.ಆರ್. ಶ್ರೀಯಾನ್‌ರನ್ನು ಬದಲೀ ಪ್ರತಿನಿಧಿಗಳನ್ನಾಗಿಯೂ ಆಯ್ಕೆ ಮಾಡಲಾಯಿತು.

ನಂತರ ಸ್ವಾಗತ ಸಮಿತಿಯ ಕಾರ್ಯದರ್ಶಿ ಕಾಂ. ಕೆ.ಆರ್. ಶ್ರೀಯಾನ್‌ರು ಪ್ರತಿನಿಧಿಗಳನ್ನುದ್ದೇಶಿಸಿ 4 ದಿನಗಳ ಕಾಲ ಸಹಕರಿಸಿದ್ದಕ್ಕಾಗಿ ಪ್ರತಿನಿಧಿಗಳನ್ನು ಅಭಿನಂದಿಸಿದರು. 11ನೇ ಸಮ್ಮೇಳನದಿಂದ ಸ್ಫೂರ್ತಿ ಪಡೆದು ರಾಜ್ಯದಾದ್ಯಂತ ಬಲಿಷ್ಠ ಸಂಘಟನೆಯನ್ನು ಕಟ್ಟುವ ಪ್ರತಿಜ್ಞೆ ಕೈಗೊಂಡು ತೆರಳಲು ವಿನಂತಿಸಿಕೊಂಡರು.

ಆದಿನ ಸಾಯಂಕಾಲ ನಡೆಯಲಿದ್ದ ಭಾರೀ ಮೆರವಣಿಗೆಯ ಕುರಿತು ಪೂರ್ವಸೂಚನೆಯನ್ನು ನೀಡಿದ ಕಾಂ. ಶ್ರೀಯಾನರು ಮಹಾನ್ ಹೋರಾಟದ ಪರಂಪರೆಯುಳ್ಳ ದ.ಕ.ಜಿಲ್ಲೆಯ ಮಂಗಳೂರಿನಲ್ಲಿ ನಡೆದ ಸಮ್ಮೇಳನ ಪಕ್ಷದ ಬೆಳವಣಿಗೆಗೆ ದಿಕ್ಸೂಚಿಯಾಗಲಿ ಎಂದು ಹಾರೈಸಿದರು.

ನಂತರ ಅಧ್ಯಕ್ಷ ಮಂಡಳಿಯ ಪರವಾಗಿ ಹಿರಿಯ ಸಂಗಾತಿ ಎನ್. ಎಲ್. ಉಪಾಧ್ಯಾಯರು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿ ಅಧ್ಯಕ್ಷ ಮಂಡಳಿಯವರೊಂದಿಗೆ ತುಂಬ ಸಹಕರಿಸಿದ್ದಕ್ಕಾಗಿ ಅಭಿನಂದಿಸಿದರು. ಸಮ್ಮೇಳನ ದುದ್ದಕ್ಕೂ ನಡೆದ ಪ್ರಬುದ್ಧ ಚರ್ಚೆ-ಚರ್ಚೆಯ ಮಟ್ಟ ಇವುಗಳನ್ನು ತೀವ್ರ ಶ್ಲಾಘಿಸಿದ ಕಾಂ. ಎನ್. ಎಲ್.ರು ಪಕ್ಷ ಮತ್ತು ಪಕ್ಷದ ಕಾರ್ಯಕರ್ತರು ಪ್ರಬುದ್ಧರಾಗಿರುವುದನ್ನು ಕಂಡು ಭಾವೋದ್ವೇಗಕ್ಕೊಳಗಾದರು. ಪಕ್ಷ ಶೈಶವಾವಸ್ಥೆಯಲ್ಲಿದ್ದಾಗಿನಿಂದಲೂ ಪಕ್ಷದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಂ. ಎನ್. ಎಲ್.ರು ತುಂಬ ಹರ್ಷಿತರಾಗಿದ್ದರು.

ಬೃಹತ್ ರ್ಯಾಲಿ ಬಹಿರಂಗ ಸಭೆ

ಈ ಹಿಂದೆಂದೂ ನಡೆಯದಿದ್ದ ರೀತಿಯಲ್ಲಿ ಅಪೂರ್ವ ರೀತಿಯ ರ್ಯಾಲಿಯನ್ನು ಸಂಘಟಿಸಲಾಗಿತ್ತು. ಮಂಗಳೂರಿನ ಸಹಸ್ರ ಸಹಸ್ರ ನಾಗರಿಕರು ಕುತೂಹಲಭರಿತರಾಗಿ ತಾವು ಹಿಂದೆಂದೂ ಕಾಣದಿದ್ದ, ನಿರೀಕ್ಷಿಸದಿದ್ದ ರೀತಿಯ ರ್ಯಾಲಿಯನ್ನು ನೋಡಿದಂಗಾದರು. ಕಾಂ. ಶ್ರೀಯಾನ್‌ರು ಮೊದಲೇ ಸೂಚನೆ ನೀಡಿದ್ದಂತಹ 20 ಸಹಸ್ರ ಜನರ ಮೆರವಣಿಗೆ ಮಂಗಳೂರನ್ನು ನಡುಗಿಸಿತು. ಮಹಿಳಾ ಸ್ವಯಂಸೇವಕರನ್ನೊಳಗೊಂಡ ಸುಮಾರು 2000 ಸಮವಸ್ತ್ರಧಾರಿ ಸ್ವಯಂಸೇವಕರು ರ್ಯಾಲಿಯ ಮುಂಭಾಗದಲ್ಲಿದ್ದರು. ನಂತರ ಸಮವಸ್ತ್ರಧರಿಸಿ ಕೆಂಬಾವುಟಗಳನ್ನು ಡಿದು ಘೋಷಣೆಗಳಿಗೆ ಪ್ರತಿಧ್ವನಿಸುತ್ತಾ 200 ಬಾಲಸ್ವಯಂಸೇವಕರು (15 ವರ್ಷದೊಳಗಿನವರು) ನಡೆದಿದ್ದರು, ಅವರ ಹಿಂದೆ ಸುತ್ತಿಗೆ-ಕುಡುಗೋಲನ್ನು ಹಿಡಿದ ಭಾರೀ ಗಾತ್ರದ ಗಂಡಸು ಹೆಂಗಸಿನ ಕಾರ್ಡಬೋರ್ಡ್‌ನ ಚಿತ್ರ ಟ್ರಕ್‌ನ್ನು ಅಲಂಕರಿಸಿತ್ತು.

ಈ ಟ್ರಕ್‌ನ ಹಿಂದುಗಡೆ ರಾಜ್ಯದ 18 ಜಿಲ್ಲೆಗಳಿಂದ ಆಗಮಿಸಿದ ಪ್ರತಿನಿಧಿಗಳಿದ್ದರು. ಪ್ರತಿನಿಧಿಗಳ ಹಿಂದೆ ಸುಮಾರು 6000 ಮಹಿಳೆಯರು ನಡೆದಿದ್ದರು. ಅವರ ಹಿಂದೆ ಜಿಲ್ಲೆಯ ಬೇರೆಬೇರೆ ತಾಲ್ಲೂಕುಗಳಿಂದ ಆಗಮಿಸಿದ ಪಕ್ಷದ ಕಾರ್ಯಕರ್ತರು, ಹಿತೈಷಿಗಳು, ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು, ವಿದ್ಯಾರ್ಥಿ ಯುವಜನರು ನಡೆದಿದ್ದರು.

ರ್ಯಾಲಿಯಲ್ಲಿ ಬೆಂಗಳೂರಿನಿಂದ, ಕೊಡಗು, ಹರಿಹರ, ಕೆ.ಜಿ.ಎಫ್., ಹಾಸನ-ಚಿಕ್ಕಮಂಗಳೂರು ಮುಂತಾದ ಬೇರೆಬೇರೆ ಪ್ರದೇಶಗಳಿಂದ ಜನರು ರ್ಯಾಲಿಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದರು.

ರ್ಯಾಲಿಯುದ್ದಕ್ಕೂ ದ.ಕ. ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆಯ ವಿವಿಧ ವೇಷ-ಭೂಷಣಗಳನ್ನು ಧರಿಸಿದ ಪಾತ್ರಧಾರಿಗಳಿದ್ದರು. ಬಿಜಾಪುರದಿಂದ ಬಂದ ಕುರುಬರ ಡೋಲಿನ ತಂಡ ವಿಶೇಷ ಆಕರ್ಷಣೆಯಾಗಿತ್ತು.

ಈ ವರದಿಗಾರನನ್ನು ಆಕರ್ಷಿಸಿದ ಅಂಶವೆಂದರೆ ರ್ಯಾಲಿಯುದ್ದಕ್ಕೂ ಕೇಳಿಬಂದ ಪ್ರಬುದ್ಧ ರಾಜಕೀಯ ಘೋಷಣೆಗಳು ಮತ್ತು ಬೃಹತ್ ಪ್ರಮಾಣದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ.

ನಂತರ 6-30ಕ್ಕೆ ರ್ಯಾಲಿ ಅಲಂಕರಿಸಿದ ನೆಹರೂ ಮೈದಾನದಲ್ಲಿ ಸಮಾವೇಶಗೊಂಡಿತು. ಸಭೆ ಪ್ರಾರಂಭವಾದ 20 ನಿಮಿಷಗಳ ನಂತರವೂ ರ್ಯಾಲಿಯಲ್ಲಿ ಜನಪ್ರವಾಹ ಆಗಮಿಸುತ್ತಲೇ ಇದ್ದಿತು.

ಮಂಗಳೂರಿನ ನಾಗರಿಕರನ್ನು ಸೇರಿ ಬಹಿರಂಗ ಸಭೆಯಲ್ಲಿ ಸುಮಾರು 50,000 ಜನರು ಪಾಲ್ಗೊಂಡಿದ್ದರು. ಸಭೆಗೆ ಪ್ರಾರಂಭದ ಮುನ್ನ ಸಮವಸ್ತ್ರಧರಿಸಿದ ಸ್ವಯಂಸೇವಕರು ಪಕ್ಷದ ರಾಜ್ಯ ಘಟಕಕ್ಕೆ ಪುನರಾಯ್ಕೆಯಾದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರಿಗೆ ಕೆಂಪುವಂದನೆ ಸಲ್ಲಿಸಿದರು. ನೆರೆಯ ಕೇರಳದ ಕಾಸರಗೋಡು-ಕಣ್ಣಾನೂರಿನಿಂದಲೂ ಸಂಗಾತಿಗಳು ಆಗಮಿಸಿ ಕರ್ನಾಟಕದಲ್ಲಿ ಪಕ್ಷವು ವೃದ್ಧಿಸಿರುವುದನ್ನು ಗಮನಿಸಿ ಹರ್ಷಿತರಾದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಕೆ. ಭಟ್‌ರು ವಹಿಸಿದ್ದರು. ಮೊದಲು ನೂರಾರು ಸಂಘಸಂಸ್ಥೆಗಳಿಂದ ನೋಟಿನ ಹಾರಗಳನ್ನು ಕಾಂ. ಇ.ಎಂ.ಎಸ್.ರಿಗೆ ಅರ್ಪಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಪಿ. ರಾಮಚಂದ್ರರಾವ್‌ರು ನಾಗರಿಕರನ್ನು, ಪಕ್ಷದ ಕಾರ್ಯಕರ್ತರನ್ನು, ಹಿತೈಷಿಗಳನ್ನು ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಎಂ. ಕೆ. ಯವರು ಕರ್ನಾಟಕದಲ್ಲಿ ಪಕ್ಷವು ಬಲಿಷ್ಠವಾಗುತ್ತಿರುವ ಕುರಿತು ಅತೀವ ಸಂತೋಷ ವ್ಯಕ್ತಪಡಿಸಿ ಇಂದಿರಾ ಸರಕಾರದ ಜನವಿರೋಧಿ ಧೋರಣೆಗಳ ವಿರುದ್ಧ ಹೋರಾಡುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲ-ಸಹಕಾರ ಕೋರಿದರು.

ನೂತನ ಚುನಾಯಿತ ರಾಜ್ಯಸಮಿತಿಯ ಸದಸ್ಯರನ್ನು ಕಾಂ. ಎಂ. ಕೆ. ಯವರು ಸಭೆಗೆ ಪರಿಚಯಿಸಿದರು.

ನಂತರ ಸಭೆಯನ್ನುದ್ದೇಶಿಸಿ ತಮಿಳ್ನಾಡಿನ ಶಾಸಕ ಹಾಗೂ ಪಕ್ಷದ ಕೇಂದ್ರ ಸಮಿತಿಯ ಸದಸ್ಯ ಕಾಂ. ಆರ್. ಉಮಾನಾಥ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್.ರು ಮಾತನಾಡಿದರು.

ಬಹಿರಂಗ ಸಭೆಯ ನಂತರ ರಾತ್ರಿ ಇಡೀ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಸಮ್ಮೇಳನದ ಕಾರ್ಯಕಲಾಪಗಳು, ಚರ್ಚೆ, ಬೃಹತ್ ರ್ಯಾಲಿ ಮತ್ತು ಬಹಿರಂಗ ಸಭೆಯಿಂದ ತೀವ್ರ ಪ್ರಭಾವಿತರಾದ ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳು ಸ್ಫೂರ್ತಿ ಪಡೆದರು. ಹೊಸ ಉತ್ಸಾಹದಿಂದ ಕರ್ನಾಟಕ ರಾಜಕೀಯ ಭೂಪಟದಲ್ಲಿ ಪಕ್ಷಕ್ಕೆ ಗಣನೀಯ ಸ್ಥಾನ ದೊರಕಿಸುವ ಅಪೇಕ್ಷೆಯಿಂದ ತೆರಳಿದರು. ●

ಅಭಿನಂದನೆಗಳು

1981 ಡಿಸೆಂಬರ್ 11 ರಿಂದ 14ರವರೆಗೆ ಮಂಗಳೂರಿನಲ್ಲಿ ಅತ್ಯಂತ ಯಶಸ್ವೀಯಾಗಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ರಾಜ್ಯ ಸಮ್ಮೇಳನದ ಯಶಸ್ವಿಗಾಗಿ ಹಗಲಿರುಳು ಶ್ರಮಿಸಿದ ಸ್ವಾಗತ ಸಮಿತಿಯ ಸದಸ್ಯರುಗಳಿಗೆ, ಪಕ್ಷದ ದ. ಕ. ಜಿಲ್ಲಾ ಸಮಿತಿಗೆ, ಪಕ್ಷದ ದ. ಕ. ಜಿಲ್ಲಾ ಸದಸ್ಯರು ಮತ್ತು ಹಿತೈಷಿಗಳಿಗೆ ಮತ್ತು ಎಲ್ಲಾ ರೀತಿಯಲ್ಲಿ ಸಹಕರಿಸಿದ ಇತರೆಲ್ಲರಿಗೂ ಪಕ್ಷದ ರಾಜ್ಯ ಸಮಿತಿಯು ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಹಾಗೆಯೇ ಸಮ್ಮೇಳನವನ್ನು ಉತ್ತಮ ರೀತಿಯಲ್ಲಿ ನಡೆಸಿ, 14ರಂದು ಬೃಹತ್ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲು ಸಹಕರಿಸಿದ ಮತ್ತು ಭಾಗವಹಿಸಿರುವ ಎಲ್ಲರಿಗೂ ರಾಜ್ಯ ಸಮಿತಿ ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ. ರಾಜ್ಯದ ಬೇರೆ ಬೇರೆಡೆಗಳಿಂದ ಬಂದ ಪ್ರತಿನಿಧಿಗಳಿಗೂ, ಕೊನೆಯ ದಿನದ ರ್ಯಾಲಿಗೆ ರಾಜ್ಯದ ಬೇರೆಬೇರೆಡೆಯಿಂದ ಬಂದವರೆಲ್ಲರಿಗೂ ರಾಜ್ಯಸಮಿತಿಯು ಅಭಿನಂದನೆಗಳನ್ನು ಸಲ್ಲಿಸುತ್ತದೆ. ಸಮ್ಮೇಳನವನ್ನು ಯಶಸ್ವೀಯಾಗಿಸಲು ಹಣಕಾಸು ಸಹಾಯ ನೀಡಿದವರೆಲ್ಲರಿಗೂ ಕೃತಜ್ಞತೆಗಳು.

ಎಂ. ಕೆ. ಭಟ್
ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT